Reg. No. M. 3975

ಕನ್ನಡನುಡಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ವಾರಪತ್ರಿಕೆ

ವಾರ್ಷಿಕ ಚಂದಾ:ರೂ. ೧-೮-೦
ಅಂಚೆ ಮೂಲಕ: ರೂ. ೨-೪-೦

ಸಂಪಾದಕ: ಅ. ನ. ಕೃಷ್ಣರಾಯ

ಪ್ರತಿ ಶುಕ್ರವಾರ ಹೊರಡುತ್ತದೆ
ಬಿಡಿ ಪತ್ರಿಕೆ: ೬ ಕಾಸು

ಸಂಪುಟ ೧] ಬೆಂಗಳೂರು, ಶುಕ್ರವಾರ, ಡಿಸೆಂಬರ್ ೨, ೧೯೩೮ [ಸಂಚಿಕೆ ೯

ತ್ಯಾಗ ವೈರಾಗ್ಯ ಮೂರ್ತಿ



ಶ್ರವಣಬೆಳ್ಗೊಳದ ಶ್ರೀ ಗೊಮ್ಮಟೇಶ್ವರ

॥ ಸಿರಿಗನ್ನಡಂ ಗೆಲ್ಗೆ ॥

ಕನ್ನಡ ನುಡಿ

ಶುಕ್ರವಾರ, ಡಿಸೆಂಬರ್ ೨, ೧೯೩೮

ಶ್ರೀ ಗೊಮ್ಮಟೇಶ್ವರ

ಕ್ಷಣಕಾಲ ನಮ್ಮನ್ನು ನಾವು ಮರೆತು, ನಮ್ಮ ಸಣ್ಣತನವನ್ನು ತೊರೆದು, ಒಂದು ದೊಡ್ಡತನದ ಅನುಭವ ಹೊಂದಬೇಕಾದರೆ ಶ್ರವಣಬೆಳ್ಗೊಳದ ಶ್ರೀ ಗೊಮ್ಮಟೇಶ್ವರ ಮೂರ್ತಿಯನ್ನು ಸಂದರ್ಶಿಸಬೇಕು. ಆ ಮೂರ್ತಿಯನ್ನು ಎಷ್ಟು ನೋಡಿದರೂ, ಎಷ್ಟು ಸಲ ನೋಡಿದರೂ, ಕಣ್ಣು ದಣಿಯದು, ಹೃದಯ ತಣಿಯದು. ಅಂಥ ಸೌಂದರ್ಯ ಮೂರ್ತಿ, ಮಹಿಮಾಮೂರ್ತಿ ಅದು.

ಮುಖದಲ್ಲಿ ಅದೇನು ಚೆಲುವು! ನೋಟದಲ್ಲಿ, ನಗೆಯಲ್ಲಿ ಅದೆಂಥ ಗೆಲವು, ಒಲವು! ಎಂಥ ಸತ್ವಪೂರ್ಣವಾದ ನಿಲವು!

ಮೂರ್ತಿ ನಿರಾಭರಣ ಮೂರ್ತಿ: ಬಾನೇ ಬಟ್ಟೆ, ತೇಲುವ ಮುಗಿಲ ಮಾಲೆಯೇ ಮಾಲೆ, ಬಳ್ಳಿಗಳೇ ಅಲಂಕಾರ.

ಇಂಥ ತ್ಯಾಗ ವೈರಾಗ್ಯ ಮೂರ್ತಿಯ, ಮಹಾಪುರುಷನ ವಿಚಾರವಾಗಿ ಮೂರು ಮಾತು ಮಾತ್ರ:

ಪ್ರಥಮ ತೀರ್ಥಂಕರನಾದ ವೃಷಭನಿಗೆ ಇಬ್ಬರು ಹೆಂಡಿರು. ಭರತನೆಂಬವನು ಮೊದಲ ಹೆಂಡತಿಯ ೯೯ ಗಂಡು ಮಕ್ಕಳಲ್ಲಿ ಹಿರಿಯನು; ಬಾಹುಬಲಿ ಎರಡನೆಯ ಹೆಂಡತಿಯ ಮಗ. ವೃಷಭನು ಬಹುಕಾಲ ರಾಜ್ಯಭಾರ ಮಾಡಿ ತಪಸ್ಸಿಗೆ ಮನಕೊಟ್ಟು, ಭರತನಿಗೆ ಅಯೋಧ್ಯೆಯಲ್ಲಿ ಪಟ್ಟಕಟ್ಟಿ, ಬಾಹುಬಲಿಯನ್ನು ಪೌದನ ಪುರದಲ್ಲಿ ಯುವರಾಜಪದವಿಯಲ್ಲಿ ನಿಲಿಸಿ, ಮಕ್ಕಳಿಗೆಲ್ಲ ರಾಜ್ಯವನ್ನು ಹಂಚಿಕೊಟ್ಟು ತಪಸ್ಸಿಗೆ ತೆರಳಿದನು.

ಕಾಲಕ್ರಮದಲ್ಲಿ ಭರತನು ಚಕ್ರರತ್ನಾಯುಧವನ್ನು ಸಂಪಾದಿಸಿ ವೈಭವದಿಂದ ರಾಜ್ಯವಾಳುತ್ತಿದ್ದು, ದಿಗ್ವಿಜಯಕ್ಕೆ ಹೊರಟು ಎಲ್ಲ ಅರಸರನ್ನೂ ಗೆದ್ದನು. ದಿಗ್ವಿಜಯದಿಂದ ಹಿಮ್ಮರಳಿ ಅಯೋಧ್ಯೆಯನ್ನು ಹೊಗುವಾಗ ಮುಂಬರಿಯುತ್ತಿದ್ದ ಚಕ್ರ ನಿಂತುಬಿಟ್ಟಿತು. ಕಾರಣವನ್ನು ಅರಸಲಾಗಿ, ತನ್ನ ತಮ್ಮಂದಿರು, ಅದರಲ್ಲಿಯೂ ಬಾಹುಬಲಿ, ತನ್ನ ಚಕ್ರಾಧಿಪತ್ಯವನ್ನು ಒಪ್ಪಲು ಸಿದ್ಧರಾಗಿಲ್ಲವೆಂದು ತಿಳಿಯಬಂತು. ಕೂಡಲೆ ಅವನು ತನ್ನ ಎಲ್ಲ ತಮ್ಮಂದಿರ ಮೇಲೂ ವಿಜಯಯಾತ್ರೆ ಹೊರಟನು. ಆದರೆ ಅವರು ಇವನಿಗೆ ಶರಣಾಗದೆ, ರಾಜ್ಯವನ್ನು ತೊರೆದು ತಮ್ಮ ತಂದೆಯ ಸನ್ನಿಧಿಯಲ್ಲಿ ತಪೋನಿರತರಾದರು.

ಭರತನು ತನ್ನ ತಮ್ಮ ಬಾಹುಬಲಿಯ ಮೇಲೂ ಯುದ್ಧ ಹೂಡಿದನು. ಜನರ ಕೊಲೆಯಾಗಬಾರದೆಂಬ ಧರ್ಮಬುದ್ಧಿಯಿಂದ ಇಬ್ಬರ ಸೈನ್ಯಗಳಿಗೂ ಯುದ್ಧ ನಡೆಯದೆ, ಇಬ್ಬರಿಗೂ ದೃಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧಗಳೆಂಬ ಮೂಬಗೆಯ ದ್ವಂದ್ವಯುದ್ಧ ನಡೆಯಿತು. ಎಲ್ಲ ಯುದ್ಧಗಳಲ್ಲಿಯೂ ಬಾಹುಬಲಿಯೇ ಗೆದ್ದನು. ಕೋಪಗೊಂಡ ಭರತನು ತನ್ನ ಚಕ್ರವನ್ನು ತಮ್ಮನ ಮೇಲೆ ಇಟ್ಟನು. ಅದು ಬಾಹುಬಲಿಯನ್ನು ಬಲವಂದು ಅವನ ಬಳಿ ಚಲಿಸದೆ ನಿಂತಿತು. ಹೀಗೆ ನಿಂತ ಚಕ್ರವನ್ನು ನೋಡಿದ ಕ್ಷಣವೇ ಅವನ ಮನಸ್ಸಿನಲ್ಲಿ ವೈರಾಗ್ಯ ಹುಟ್ಟಿತು; ಯಾವ ಒಂದು ರಾಜ್ಯಕ್ಕಾಗಿ ತನ್ನ ಅಣ್ಣ ತನ್ನ ಮೇಲೆ ಕತ್ತಿಕಟ್ಟಿದನೋ ಅದರಲ್ಲಿ ಜುಗುಪ್ಸೆಯಾಯಿತು. ತನ್ನ ತಂದೆ ತನಗೆ ಕೊಟ್ಟಿದ್ದ ರಾಜ್ಯವನ್ನೂ ಅಣ್ಣನಿಗೇ ಕೊಟ್ಟುಬಿಟ್ಟು, ತಪಸ್ಸಿಗೆ ತೆರಳಿ, ಒಂದು ವರ್ಷಕಾಲ ಒಂದೇ ಸಮನಾಗಿ ನಿಂತು ಉಗ್ರವಾದ ತಪಸ್ಸು ಮಾಡಿದನು. ಆದರೂ ಕೇವಲಜ್ಞಾನೋತ್ಪತ್ತಿಯಾಗಲಿಲ್ಲ. ಅಣ್ಣನ ನೆಲದ ಮೇಲೆ ನಿಂತಿರುವೆನೆಂಬ ಅಭಿಮಾನವೇ ಕಾರಣವಾಗಿ ಬಾಹುಬಲಿಗೆ ಕೇವಲಜ್ಞಾನವುಂಟಾಗಿಲ್ಲವೆಂಬುದನ್ನು ಭರತನು ತನ್ನ ತಂದೆ ಆದಿನಾಥ (ವೃಷಭ) ನಿಂದ ತಿಳಿದು, ತನ್ನ ತಮ್ಮನ ಬಳಿ ಹೋಗಿ ಅವನ ಕಾಲಿಗೆ ಎರಗಿ, ಅವನಲ್ಲಿ ನೆಲಸಿದ್ದ ನೆಲದ ಅಭಿಮಾನವನ್ನು ಕಳೆಯಲು ಬಾಹುಬಲಿಗೆ ಕೇವಲಜ್ಞಾನ ಉದಯಿಸಿತು; ಅವನು ಮುಕ್ತಿಗೆ ಸಂದನು. ವೀರ ವೈರಾಗ್ಯ ಮೂರ್ತಿಯಾದ ಈ ಬಾಹುಬಲಿಯೇ ಗೊಮ್ಮಟೇಶ್ವರ.

ಜೈನರಿಗೆ ಮಾತ್ರವಲ್ಲ, ಎಲ್ಲ ಕನ್ನಡಿಗರಿಗೂ, ಅಷ್ಟೇಕೆ ಎಲ್ಲ ಕಲಾ ಪ್ರೇಮಿಗಳಿಗೂ ಯಾತ್ರಾಸ್ಥಳವಾದ ಶ್ರವಣಬೆಳ್ಗೊಳದ ಗೊಮ್ಮಟೇಶ್ವರ ವಿಗ್ರಹವಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಕಡೆ (ಕಾರ್ಕಳ, ಏಣೂರು) ಎರಡು ಗೊಮ್ಮಟನ ವಿಗ್ರಹಗಳಿವೆ. ಶ್ರವಣ ಬೆಳ್ಗೊಳದ ಗೊಮ್ಮಟ ವಿಗ್ರಹವೇ ಎಲ್ಲಕ್ಕೂ ದೊಡ್ಡದು; ಅದು ೫೭ ಅಡಿಯ ಒಂದೇ ಕಲ್ಲಿನ ವಿಗ್ರಹ. ಇನ್ನು ೪೩ ವರ್ಷವಾದರೆ ಅದು ನೈವೆತ್ತು ೧,೦೦೦ ವರ್ಷ.

ಈ ವಿಗ್ರಹವನ್ನು ಮಾಡಿಸಿದ ಮಹನೀಯ ಚಾವುಂಡರಾಯ; ಮಾಡಿಸಿದ್ದು ಕ್ರಿ. ಶ. ೯೮೧ರಲ್ಲಿ. ಚಾವುಂಡರಾಯನು ಗಂಗರಸರಾದ ಮಾರಸಿಂಹ, ರಾಚಮಲ್ಲ ಮತ್ತು ರಕ್ಕಸಗಂಗ (ಕ್ರಿ. ಶ. ೯೭೭-೯೮೪) ಎಂಬವರ ಆಶ್ರಯದಲ್ಲಿ ಸೇನಾಧಿಪತಿಯೂ ಮಂತ್ರಿಯೂ ಆಗಿದ್ದನು. ಅಲ್ಲದೆ, ಕನ್ನಡ ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ದೊಡ್ಡ ವಿದ್ವಾಂಸನಾಗಿದ್ದನು. ಇವನ ಹೆಸರನ್ನು ಕನ್ನಡಿಗರು ಎಂದೆಂದೂ ಮರೆಯುವಂತಿಲ್ಲ: ಗೊಮ್ಮಟೇಶ್ವರ ವಿಗ್ರಹದ ಪೀಠದಲ್ಲಿ "ಶ್ರೀ ಚಾಮುಂಡರಾಜಂ ಮಾಡಿಸಿದಂ" ಎಂಬ ಬರಹ ಚಾವುಂಡರಾಯನ ಹೆಸರನ್ನು ಶಾಶ್ವತಗೊಳಿಸಿದೆ. ಗೊಮ್ಮಟನ ಪ್ರತಿಮೆಯನ್ನು ಅಪಾರ ದ್ರವ್ಯವ್ಯಯಮಾಡಿ ಮಾಡಿಸಿದ್ದಕ್ಕಾಗಿ ಅವನ 'ಪರಮಸ್ವಾಮಿ'ಯಾದ ರಾಚಮಲ್ಲನು ಅವನಿಗೆ 'ರಾಯ' ಎಂಬ ಬಿರುದನ್ನು ಕೊಟ್ಟನು.

ಚಾವುಂಡರಾಯನು ೨೪ ತೀರ್ಥಂಕರರ ಚರಿತ್ರೆಯನ್ನೊಳಕೊಂಡ 'ತ್ರಿಷಷ್ಟಿ ಲಕ್ಷಣ ಮಹಾಪುರಾಣ' ವನ್ನು ಕನ್ನಡದಲ್ಲಿ ಬರೆದಿದ್ದಾನೆ. (ಕ್ರಿ. ಶ. ೯೭೮) ಇದು 'ಚಾಮುಂಡರಾಯ ಪುರಾಣಂ' ಎಂದು ಪ್ರಸಿದ್ಧವಾಗಿದೆ. ಕನ್ನಡದಲ್ಲಿ ಇದುವರೆಗೆ ದೊರೆತಿರುವ ಗದ್ಯ ಗ್ರಂಥಗಳಲ್ಲಿ ಇದೇ ಮೊದಲನೆಯದು.

ಗೊಮ್ಮಟೇಶ್ವರ ಮಹಾಮುನಿಯನ್ನು ನೆನೆದಾಯ್ತು; ಆತನ ಪ್ರತಿಮೆಯನ್ನು ಮಾಡಿಸಿದ ಮಹಾಮಂತ್ರಿಯನ್ನು ನೆನೆದಾಯ್ತು; ಆದರೆ, ದಿವ್ಯಭವ್ಯವಾದ ಗೊಮ್ಮಟ ಮೂರ್ತಿಯನ್ನು ಕಂಡರಿಸಿದ ಶಿಲ್ಪಿವರ್ಯನನ್ನು ಹೆಸರಿಸಿ ನೆನೆಯುವ ಭಾಗ್ಯವನ್ನು ಕಾಲಪುರುಷ ಕನ್ನಡ ನಾಡಿಗೆ ಉಳಿಸಲಿಲ್ಲ.

ಕೆ. ವಿ. ರಾಘವಾಚಾರ್, ಬೆಂಗಳೂರು.

ಸಾದರ ಸ್ವೀಕಾರ

೧. ದೇಸರೆಯ ಕಾಣಿಕೆ (ಕವಿತೆ):
ಲೇಖಕರು: ಶ್ರೀ॥ ಜಿ. ಎನ್. ಲಕ್ಷ್ಮಣ ಪೈ, ಪುತ್ತೂರು.

೨. ಮೈಸೂರಿನ ಮಹನೀಯರು—ಭಾಗ ೧ (ಜೀವನ ಚರಿತೆ):
ಲೇಖಕರು: ಶ್ರೀ॥ ಶ್ರೀ ಸುಬ್ರಹ್ಮಣ್ಯ ಅವರು, ನಂಜನಗೂಡು.

೩. ಹಳ್ಳಿಯ ಹಾಡುಗಳು:
ಸಂಗ್ರಾಹಕರು: ಶ್ರೀ॥ಗಳಾದ ಬಿ. ಎನ್. ರಂಗಸ್ವಾಮಿಯವರು ಮತ್ತು ಗೊರೂರು ರಾಮಸ್ವಾಮಿ ಐಯಂಗಾರ್ಯರವರು, ಗೊರೂರು.

೪. ಕನ್ನಡ ಗದ್ಯಮಾಲೆ:
ಸಂಪಾದಕರು: ಪ್ರೊ॥ ಎಸ್. ಎಸ್. ಮಾಳವಾಡರವರು, ಎಂ. ಎ., ಧಾರವಾಡ.

ಮುದವೀಡು ಕೃಷ್ಣರಾಯರು

ಶ್ರೀ. ದ. ಕೃ. ಭಾರದ್ವಾಜ, ಬೆಂಗಳೂರು.

೧೯೧೩—೧೪ನೆಯ ಸಾಲಿನಲ್ಲಿ ಒಂದು ದಿನ ಬಸವನಗುಡಿಯ ಶ್ರೀ ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ನಿಷಿದ್ಧಾನಂದರೊಂದಿಗೆ ಬಂಗಾಳಿ ಭಾಷೆಯ ವಿಷಯವಾಗಿ ಚರ್ಚೆ ಮಾಡುತ್ತಲಿದ್ದೆ. ಆಗ ಅಲ್ಲಿಗೆ ಹಣಮಂತಾಚಾರ್ಯ ಗುಡಿ ಎಂಬ ನನ್ನ ಯುವಕ ಮಿತ್ರರು ತಮ್ಮೊಂದಿಗೆ ಶ್ರೀ ರಾಮಕೃಷ್ಣಾಶ್ರಮವನ್ನು ದರ್ಶಿಸಲು ಬಂದ ವ್ಯಕ್ತಿಯ ಪರಿಚಯ ಮಾಡಿಸಿದರು. ವ್ಯಕ್ತಿಯ ದುಂಡಾದ ಮುಖ, ನಾಗಪುರಿ ಅಂಚಿನ ಧೋತ್ರ, ಪೋಷಾಕಿನ ಶಿಸ್ತು ಇವು ಅವರ ಶೃಂಗಾರ ಪ್ರಿಯತೆಯನ್ನು ವ್ಯಕ್ತಪಡಿಸುತ್ತಿದ್ದುವು. ಆಗತಾನೆ ನಾನು ಕನ್ನಡ ನುಡಿಯ ಸೇವೆಗಾಗಿ ಹಂಬಲಿಸಿ ನನ್ನ ಒಂದೆರಡು ಲೇಖನಗಳೂ ಪತ್ರಿಕೆಯಲ್ಲಿ ಪ್ರಕಟವಾಗಿದ್ದುವು. ಅಂಥಾ ಸಮಯದಲ್ಲಿ ವ್ಯಕ್ತಿ ಪರಿಚಯ ಮಾಡಿಸಿದವರು, ಇವರೇ “ ಧಾರವಾಡದ ‘ಕರ್ನಾಟಕ ವೃತ್ತ’ ಮತ್ತು ‘ಧನಂಜಯ’ ಪತ್ರಿಕೆಯ ಸಂಪಾದಕರು ಮಿಸ್ಟರ್ ಮುದವೀಡು ಕೃಷ್ಣರಾಯರು” ಎಂದು ಹೇಳಿ, ನನ್ನ ಪರಿಚಯವನ್ನೂ ಅವರಿಗೆ ಹೇಳಿದರು. ಆಗ ಅವರು, “ನೀವೇನೋ ಮಿಸ್ಟರ್ ಭಾರದ್ವಾಜರು” ಎಂದು ಅವರ ಸ್ವಭಾವ ಸಹಜವಾದ ಸಿಂಹನಾದದಲ್ಲಿ ನುಡಿದರು. ನಾನು, ‘ದ. ಕೃ. ಭಾರದ್ವಾಜನೆಂದು ನನ್ನನ್ನು ಕರೆಯುತ್ತಾರೆ’ ಎಂದೆನು. ಆಗ ಅವರು ಕನ್ನಡ ನುಡಿ ನಾಡಿನ ವಿಚಾರದಲ್ಲಿ ಧಾರವಾಡದವರು ಮಾಡುತ್ತಿರುವ ಕೆಲಸದ ವಿಚಾರವನ್ನು ಹೇಳಿದರು. ಹೀಗೆ ಮುದವೀಡರ ಪರಿಚಯಕ್ಕೆ ಮೊದಲಾಯಿತು. ಅನಂತರ ೧೯೧೮-೧೯ ನೆಯ ಸಾಲಿನಲ್ಲಿ ನಾನು ಮಂಗಳೂರಿನಲ್ಲಿದ್ದ ರಾಷ್ಟ್ರೀಯ ಶಿಕ್ಷಕಿಯರ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಶ್ರೀ ಮುದವೀಡು ಕೃಷ್ಣರಾಯರೂ ದಿವಂಗತ ಕಡಪಾ ರಾಘವೇಂದ್ರರಾಯರೂ ನಾಗಪುರದ ಕಾಂಗ್ರೆಸಿನಲ್ಲಿ ಭಾಷಾವಾರು ಪ್ರಾಂತ ರಚನೆಗನುಸಾರವಾಗಿ ಕರ್ನಾಟಕ ಪ್ರಾಂತವನ್ನೂ ರಚಿಸಬೇಕೆಂಬ ಧೋರಣೆಯನ್ನು ಕಾಂಗ್ರೆಸಿನ ಮುಂದೆ ಮಂಡಿಸಬೇಕೆಂದು ಸಂಕಲ್ಪಿಸಿ, ಅದಕ್ಕಾಗಿ ನಾವು ಕನ್ನಡ ನಾಡಿನವರ ಅಭಿಪ್ರಾಯವನ್ನರಿಯಲು ಬಂದಿದ್ದೇವೆ ಎಂದರು. ಆಗ ಅವರನ್ನು ‘ ಸ್ವದೇಶಾಭಿಮಾನಿ ’ ಮತ್ತು ‘ಕಂಠೀರವ’ ಪತ್ರಿಕೆಗಳ ಸಂಪಾಕದರ ಬಳಿಗೆ ಕರೆದುಕೊಂಡು ಹೋಗಿ, ಅವರಿಗಾಗಿ ಅಂದು ಸಂಜೆಗೆ ಒಂದು ಬಹಿರಂಗಸಭೆಯನ್ನೂ ಏರ್ಪಡಿಸಲಾಯಿತು. ಅದರಲ್ಲಿ ಇಬ್ಬರು ಮಹನೀಯರೂ ಕನ್ನಡ ನಾಡಿನ ಅಂದಿನ ಸ್ಥಿತಿ, ಅದರಿಂದ ಆಗಿರುವ ಕನ್ನಡನುಡಿಯ ಸ್ಥಿತಿ, ಅದಕ್ಕಾಗಿ ಆಗಬೇಕಾಗಿರುವ ಕರ್ನಾಟಕದ ಏಕೀಕರಣ, ಕರ್ನಾಟಕ ಪ್ರಾಂತ ರಚನೆಯ ಆವಶ್ಯಕತೆ ಇತ್ಯಾದಿ ವಿಷಯವಾಗಿ ಭಾಷಣಮಾಡಿದರು. ಅನಂತರ ಅವರು ಅದೇ ಉದ್ದೇಶದಿಂದ ಉಡುಪಿಗೂ ಹೋಗಿ ಭಾಷಣ ಮಾಡಿ ಬಂದು, ಮುಂದೆ ನೀಲಗಿರಿ ಸೇಲಂ ಕಡೆಗೆ ಹೊರಡುತ್ತೇವೆಂದು ಹೊರಟರು. ಅಂದಿನಿಂದ ಅವರ ನನ್ನ ಪರಿಚಯವು ದಿನ ದಿನಕ್ಕೆ ಹೆಚ್ಚುತ್ತ ಹೋಯಿತು. ಅಂದಿನಿಂದ ಇಂದಿನವರೆಗೆ ನಡೆದಿರುವ ಕರ್ನಾಟಕದ ಏಕೀಕರಣ ವಿಚಾರದಲ್ಲಿ ಬೀಜವನ್ನು ನೆಟ್ಟವರಲ್ಲಿ ಶ್ರೀ|| ಆಲೂರ ವೆಂಕಟರಾಯರು, ಕಡಪಾ ರಾಘವೇಂದ್ರರಾಯರು ಮತ್ತು ಮುದವೀಡು ಕೃಷ್ಣರಾಯರು ಇವರುಗಳ ಹೆಸರನ್ನು ಕನ್ನಡಿಗರು ಮರೆಯುವಂತಿಲ್ಲ. ಆಗ ಈ ಮೂವರು ಮಹನೀಯರಿಗೆ ಬೆಂಬಲವಾಗಿ ಧಾರವಾಡದ ಗೆಳೆಯರ ಗುಂಪಿನವರೂ, ಬೆಳಗಾವಿಯ ಡಾ|| ಸವಣೂರ ಹಣಮಂತರಾಯರೂ ವಿಶೇಷ ಸೇವೆಯನ್ನು ಸಲ್ಲಿಸಿರುವರು. ಕರ್ನಾಟಕ ಸಾಹಿತ್ಯ ಪರಿಷತ್ತಿನ ವ್ಯಾಪಕತ್ವವು ಈಗಿನಷ್ಟಿಲ್ಲದಿದ್ದ ಆ ಸಮಯದಲ್ಲಿ ಈ ಮಹನೀಯರು ಕನ್ನಡನಾಡಿನ ಏಕೀಕರಣಕ್ಕಾಗಿ ಸಲ್ಲಿಸಿರುವ ಸೇವೆ ಅಮೋಘವಾದುದಾಗಿದೆ. ಆ ಸಮಯದಲ್ಲಿ ಇದೇ ಕಾರ್ಯಸಾಧನೆಗಾಗಿ “ಜಯ ಕರ್ನಾಟಕ” ಜನ್ಮ ತಳೆಯಿತು. ಮತ್ತೆ ಅದಕ್ಕೆ ಮುಂಚೆ ಮುದವೀಡು ಕೃಷ್ಣರಾಯರ ಪತ್ರಿಕೆಯಂತೂ ಇದೇ ವಿಷಯಕ್ಕೆ ಮೀಸಲಾಯಿತು. ಧಾರವಾಡದಲ್ಲಿ ದಿವಂಗತ ಶ್ರೀ ಕೆರೂರ ವಾಸುದೇವಾಚಾರ್ಯರೂ ಒಂದು ಪತ್ರಿಕೆಯನ್ನು ಹೊರಡಿಸಿದರು. ಮತ್ತೆ ಡಾ|| ಸವಣೂರ ಹಣಮಂತರಾಯರ ‘ಕರ್ನಾಟಕ ಮಿತ್ರ’ ಪತ್ರಿಕೆಯೂ ಇದೇ ಕೆಲಸವನ್ನು ಮಾಡಲಾರಂಭಿಸಿತು. ಆದರೆ ಬೆಳಗಾವಿ ಕನ್ನಡಿಗರ ಹೆಚ್ಚಿನ ಸಹಕಾರವಿಲ್ಲದೆ ಕೆಲವು ಮರಾಠಿ ಮಿತ್ರರ ಉಪಟಳದಿಂದ ಅದು ಹೆಚ್ಚುಕಾಲ ಬಾಳಲಾರದೆ ಹೋಯಿತು. ಈ ಕಾರ್ಯಗಳಿಗೆಲ್ಲ ಆಲೂರ ವೆಂಕಟರಾಯರು ಮೂಲಋಷಿಗಳಾದರೆ ಮುದವೀಡು ಕೃಷ್ಣರಾಯರು ಪ್ರಚಾರಕರಾದರು.



ಒಂದು ದಿನ ಮದ್ರಾಸ ಬೀಚಿನಲ್ಲಿ ದಿವಂಗತ ಶ್ರೀ ವಿಪಿನ ಚಂದ್ರಪಾಲರು ಸಿಂಹನಾದದಿಂದ ಭಾಷಣ ಮಾಡುವಾಗ ಪ್ರೇಕ್ಷಕರೊಲ್ಲಬ್ಬರು ‘ಗಟ್ಟಿಯಾಗಿ ಹೇಳಿ’ ಎಂದರು. ಆಗ ಪಾಲರು ಸಮುದ್ರದ ತೆರೆಗಳ ನಾದವನ್ನು ತಮ್ಮ ನಾದದಲ್ಲಿ ಮುಳುಗಿಸುವಂತೆ ಮಾತನಾಡುತ್ತಾ “ಈಗ ನಿಮಗೆ ಕೇಳಿಸುವುದೋ” ಎಂದರು. ಆದರೆ ಕರ್ನಾಟಕದ ಮುದವೀಡು ಕೃಷ್ಣರಾಯರು ಭಾಷಣ ಮಾಡಲಾರಂಭಿಸುವಾಗ ಮೆತ್ತಗೆ ಆರಂಭಿಸಿದರೂ, ಸ್ವಲ್ಪ ಹೊತ್ತಿಗಾಗಲೇ ಅವರೂ ಆವೇಶಗೊಂಡರು. ಪ್ರೇಕ್ಷಕರನ್ನೂ ಆವೇಶದಲ್ಲಿ ಮುಳುಗಿಸುವ ಸಿಂಹ ಗರ್ಜನೆಯಂಥ ಧ್ವನಿ ಅವರದು. “ ಲೌಡರ್ ಪ್ಲೀಸ್!” ಎಂದು ಅವರಿಗಾರೂ ಅನ್ನುವಂತೆಯೇ ಇಲ್ಲ. ಕೃಷ್ಣರಾಯರ ಬರಹದ ಶೈಲಿಯೂ ಅವರು ಮಾತಾಡಿದಂತೆಯೆ. ಅವರ ಮಾತಿನಲ್ಲಿ ವಕ್ತೃತ್ವ ಶೈಲಿಯಿದೆ. ಕೃಷ್ಣರಾಯರ ಪತ್ರಿಕೆಯನ್ನೋದದಿರುವವರಿಗೆ ಅವರ ಲೇಖನ ಪರಿಚಯವಾಗುವಂತಿಲ್ಲ. ಏಕೆಂದರೆ ಕೆಲವು ಪತ್ರಿಕೆಗಳ ವಿಶೇಷ ಸಂಚಿಕೆಗಳಿಗೆ ಅವರು ಬರೆದ ಲೇಖನಗಳು ಬೇರೆಯಾಗಿಲ್ಲ. ಅವರು ಕರ್ನಾಟಕ ಏಕೀಕರಣ, ಕರ್ನಾಟಕ ಪ್ರಾಂತನಿರ್ಮಾಣಕ್ಕಾಗಿ ಅಲ್ಲಲ್ಲಿ ಸುತ್ತಿ ಕನ್ನಡಿಗರನೆಚ್ಚರಿಸುವ ಕೆಲಸದಲ್ಲಿ ಒಂದು ಕಡೆ ನೆಲೆಯಾಗಿ ನಿಂತು ಸಾಹಿತ್ಯ ರಚನೆಯನ್ನು ಮಾಡಲು ಅವರಿಗೆ ಅವಕಾಶ ದೊರೆಯಲಿಲ್ಲ. ಅದರಿಂದಲೆ ಅವರ ಪತ್ರಿಕೆಗಾಗಿ ಕೆಲಸ ಮಾಡಲವಕಾಶವಾಗಲಿಲ್ಲ. ಮತ್ತೆ ಆ ಕಾರಣದಿಂದ ಅವರ ಪತ್ರಿಕೆ ವರ್ತಮಾನ ಪತ್ರಿಕೆ (ನ್ಯೂಸ್ ಪೇಪರ್) ಆಗಿರದೆ ಕೇವಲ ಅಭಿಪ್ರಾಯದ ಪತ್ರಿಕೆ (ವ್ಯೂಸ್ ಪೇಪರ್) ಆಗಿತ್ತು. ಅಂಥಾ ಪತ್ರಿಕೆಗೆ ಆಗಿನ್ನೂ ಜಾಗೃದವಸ್ಥೆಗೆ ಬರುತ್ತಿದ್ದ ಕರ್ನಾಟಕದಿಂದ ಹೆಚ್ಚು ಉತ್ತೇಜನ ದೊರೆಯುವುದು ಸಾಧ್ಯವಾಗದೆ ಅದು ನಿಂತು ಹೋಯಿತು. ಇನ್ನು ರಾಜಕೀಯ ರಂಗದಲ್ಲಿ ಕೃಷ್ಣರಾಯರು ಕಾರಾಗೃಹ ಕಷ್ಟನಿಷ್ಠುರಗಳನ್ನೂ ಸಹಿಸಿರುವರು. ೧೯೩೨—೩೩ನೆಯ ಸಾಲಿನಲ್ಲಿ ನಾನು ಕಾರಾಗೃಹದಿಂದ ಹೊರಬಿದ್ದು ಮಂಗಳೂರಿಗೆ ಮರಳಿದ ಬಳಿಕ ಶ್ರೀ|| ದಿವಾಕರ ಮತ್ತು ಶ್ರೀ|| ಮುದವೀಡರನ್ನು ಉಪನ್ಯಾಸಗಳಿಗಾಗಿ ಆಹ್ವಾನಿಸಲಾಯಿತು. ಆಗ ಜಿಲ್ಲೆಯ ಅನೇಕ ಭಾಗಗಳಲ್ಲಿ ಸುತ್ತುತ್ತ ನಾವು ಕಾಸರಗೋಡಿಗೆ ಬಂದೆವು. ಅಲ್ಲಿ ಉಪನ್ಯಾಸಗಳು ಮುಗಿದ ಬಳಿಕ ರಾತ್ರಿ, ಮುದವೀಡು ಕೃಷ್ಣರಾಯರು ತಮ್ಮ ‘ಕೀರ್ತನೆ’ಯನ್ನಿಟ್ಟುಕೊಂಡಿದ್ದರು. ಅದನ್ನು ಕೇಳಿ ಆಶ್ಚರ್ಯವಾಗಿ, “ನಿಮ್ಮ ಕೀರ್ತನೆ ವಿಷಯವಾವುದು ?” ಎಂದೆನು. ಅದಕ್ಕೆ ಅವರು, “ ಕರ್ನಾಟಕದ ಏಕೀಕರಣ, ಪ್ರಾಂತರಚನೆ” ಎಂದು ಕೀರ್ತನವನ್ನೂ ಮಾಡಿದರು. ಇದರಿಂದ ಅವರ ಜೀವನದ ಕನಸು ಏನಾಗಿದೆಯೆಂದು ತಿಳಿಯಬಹುದು. ಮುದವೀಡರು ಯಾರಿಗಾದರೂ ವಿರೋಧಿಗಳಾದರೆ ತೀವ್ರ ವಿರೋಧಿಗಳಾಗಿ, ಕನ್ನಡ ನಾಡು ನುಡಿಗಳನ್ನು ವಿರೋಧಿಸುವವರನ್ನು ಸದೆಬಡಿಯಲು ಯತ್ನಿಸುವುದು ಅವರ ಸ್ವಭಾವವಾಗಿರುವುದರಿಂದ ಇಂದಿನ ಕರ್ನಾಟಕದ ರಾಜಕೀಯರಂಗದಲ್ಲಿ ಅವರಿಗೆ ಸರಿಯಾದ ಸ್ಥಾನ ದೊರೆಯದಾಗಿದೆ. ವಿರೋಧಿಗಳೊಂದಿಗೆ ಕುಸ್ತಿಗೆ ನಿಂತು ಬಿಡುವರವರು. ಶಾಂತಿ, ಸಮಾಧಾನ, ಒಪ್ಪಂದಗಳ ರೀತಿ ಅವರ ಸ್ವಭಾವದಲ್ಲಿಲ್ಲ. ಇದು ಅವರಲ್ಲಿರುವ ಕೆಲವರಿಗೆ ದೋಷವಾಗಿ ಕಾಣಬಹುದು.

ಕಳೆದ ವಿಜಯನಗರ ಸಾಮ್ರಾಜ್ಯೋತ್ಸವ ಸಮಯದಲ್ಲಿ ಭಾಷಣ ಮಾಡಲು ಬಂಗಾಳಿಗಳು, ಆಂಧ್ರರು ಮತ್ತು ಕೇರಳೀಯರು ಇವರುಗಳಲ್ಲಿ ಒಬ್ಬೊಬ್ಬ ಪ್ರತಿನಿಧಿ ಬೇಕಾಗಿದ್ದನು. ಅಗ ಅದೇ ಸಮಯದಲ್ಲಿ ಹಂಪಿಯಲ್ಲಿ ಸೇರಿದ ನಿಖಿಲ ಭಾರತೀಯ ಆನುವಂಶಿಕ ವೈದ್ಯರ ಸಮ್ಮೇಲನವು ಸೇರಿತ್ತು. ಅದಕ್ಕಾಗಿ ಬಂದಿದ್ದ ಪ್ರತಿನಿಧಿಗಳಲ್ಲಿ ಅವರಿಗೆ ಬೇಕಾಗಿದ್ದ ಭಾಷಣಕಾರರನ್ನು ಆ ಪ್ರಾಂತಗಳವರಿಂದ ಆರಿಸಿ ತೋರಿದೆನು. ಸಭಾಕಾರ್ಯವೆಲ್ಲ ಮುಗಿದ ಬಳಿಕ, ಮುದವೀಡರು ಬಂದು ನನ್ನನ್ನು ಗಟ್ಟಿಯಾಗಿ ಅಪ್ಪಿಕೊಂಡು ಆನಂದಾಶ್ರುಗಳನ್ನು ಸುರಿಸಿದರು. ನಾನು, "ಏಕೆ? ಏನಾಯಿತು?" ಎಂದು ಕೇಳಲು, "ಇಂದು ಎಲ್ಲರ ಸಹಕಾರದಿಂದ ಕರ್ನಾಟಕ ಸಾಮ್ರಾಜ್ಯ ವೈಭವದ ಗುಣಗಾನವನ್ನು ಸಮಗ್ರ ಭಾರತದ ಎಲ್ಲ ಪ್ರಾಂತಗಳವರೂ ಹಾಡುವಂತಾಯಿತು! ಇದನ್ನು ಈ ಜನ್ಮದಲ್ಲಿಯೆ ನಾನು ನೋಡುವಂತಾದುದು ನನ್ನ ಸೌಭಾಗ್ಯ! ಇನ್ನು ಕರ್ನಾಟಕ ಎಂದು ಒಂದು ಸ್ವತಂತ್ರ ಪ್ರಾಂತವೆನಿಸಿಕೊಂಡು, ಎಂದು ನಾಡಿನವರೆಲ್ಲರೂ ಮೈಸೂರಿನವರು, ಮಂಗಳೂರಿನವರು, ಧಾರವಾಡದವರು ಎಂಬ ಭೇದವನ್ನು ಮರೆತು ನಾವು ಕನ್ನಡಿಗರು ಎಂದು ಎದೆ ತಟ್ಟಿ ಹೇಳಿಕೊಳ್ಳುವಂತಾಗುವುದೋ? ಅದನ್ನಷ್ಟು ನೋಡಿಬಿಟ್ಟರೆ, ನನ್ನ ಪ್ರಾಣ ಅಂದೇ ಈ ದೇಹದಿಂದ ಹಾರಿ ಹೋದರೂ ಚಿಂತೆಯಿಲ್ಲ" ಎಂದರು. ಮುದವೀಡರ ಹೃದಯ ಸಮಯಾಂತರದಲ್ಲಿ ಹೀಗೆ ಹೆಣ್ಣುಕರುಳಾಗಿ ಬಿಡುವುದು. ಅವರಿಂದ ಶಾಸ್ವತ ಸಾಹಿತ್ಯಸೇವೆ ಆಗಿರದಿದ್ದರೂ, ಕನ್ನಡ ನಾಡು ನುಡಿಗಳಿಗಾಗಿ ಈ ಇಳಿವಯಸ್ಸಿನಲ್ಲಿಯೂ ಅವರು ಸಲ್ಲಿಸಿರುವ ಸೇವೆ ಇನ್ನು ಮುಂದಿನ ಸಾಹಿತಿಗಳ ಸೇವೆಗೆ ಅಡಿಗಲ್ಲಾಗಿರುವುದೆಂದರೆ ಅತ್ಯುಕ್ತಿಯಾಗದು. ಅವರು ಬಿತ್ತಿದ ಕರ್ನಾಟಕದ ಏಕೀಕರಣ, ಕನ್ನಡ ಪ್ರಾಂತರಚನೆ, ಕರ್ನಾಟಕ ವಿಶ್ವವಿದ್ಯಾನಿಲಯದ, ಕನ್ನಡ ನುಡಿಯ ಏಳಿಗೆಯ ವಿಚಾರಗಳು ಫಲಿಸಿ, ಅವರಿಗೆ ಆನಂದವೂ ಮನಶ್ಶಾಂತಿಯೂ ದೊರೆಯುವಂತಾಗಲಿ!

ಕನ್ನಡ ಜೀವ!

ಶ್ರೀ ದೇಸಾಯಿ ಪಾಂಡುರಂಗರಾಯರು, ಎಂ. ಎ., ಧಾರವಾಡ.

ಕಬ್ಬಿಗನೆನಿಸಿಕೊಳ್ಳಲು ಹಾತೊರೆಯುತ್ತಿದ್ದ ನನ್ನ ಕಾಡುಗೆಳೆಯನೊಬ್ಬನು ಕನ್ನಾಡ ಏಕೀಕರಣವನ್ನು ಕುರಿತು ಒಂದು ಕವನವನ್ನು ಕಟ್ಟಿರುವನು. ಆದರ ಪಲ್ಲವಿ:

ಆ ನಾಡು ಈ ನಾಡು,
ಸಾಕು ಸಾಕೀ ಪಾಡು.
ಹಾಡು ಒಂದೇ ಹಾಡು,
ಕನ್ನಾಡು ಕನ್ನಾಡು
ಎಲ್ಲ ಒಂದೇ ಗೂಡು!

ಪಥ್ಯವಾದ ಈ ಪದ್ಯದ ಭಾವವನ್ನೇ ಹೃದ್ಯವಾದ ಗದ್ಯದಲ್ಲಿ ಕರ್ನಾಟಕದ ಬೇರೆ ಬೇರೆ ಭಾಗದ ನನ್ನ ಗೆಳೆಯರು ಆಗಾಗ ಹಾಡುವುದನ್ನು ನಾನು ಕೇಳುತ್ತಲಿದ್ದೇನೆ. "ಬರಿಯ ಏಕೀಕರಣ ಏಕೀಕರಣವೆಂದು ಹೋರಾಡಿದರೆ ಪ್ರಯೋಜನವೇನು ಸ್ವಾಮಿ! ನಾನು ಧಾರವಾಡದವನು, ನಾನು ಮಂಗಳೂರಿನವನು, ನಾನು ಆ ಕಡೆಯವನು, ನಾನು ಈ ಕಡೆಯವನು ಎಂಬ ತಿಳಿವಳಿಕೆ ಕನ್ನಡಿಗರಲ್ಲಿ ಅಡಗಿ ಹೋಗಬೇಕು ನೋಡಿ. ನಾನು ಕನ್ನಡಿಗನು, ಕನ್ನಡಿಗನು, ಮತ್ತೆ ಕನ್ನಡಿಗನು ಎಂಬ ಒಂದೇ ಒಂದು ಅಭಿಮಾನ ಚಿಮ್ಮಿ ಏಳಬೇಕು. ಇದುವೆ ಕರ್ನಾಟಕದ ನೈಜ ಏಕೀಕರಣ!"

ಮುತ್ತಿನಂತಹ ಮಾತು, ರತ್ನದಂತಹ ರಹಸ್ಯ. ಆದರೆ ಇದನ್ನು ಸಾಧಿಸುವ ಬಗೆ ಯಾವುದು? ಭಾವನೆಯಿಂದಲೆ ಭವ್ಯತೆಯನ್ನು ಪಡೆಯುತ್ತಿದ್ದರೆ ಭೂಲೋಕವೆ ವೈಕುಂಠವಾಗುತ್ತಿತ್ತು. ಕನಸಿನಿಂದಲೆ ಕೈಲಾಸ ಕೈವಶವಾಗುತ್ತಿದ್ದರೆ, ಕರ್ಮಭೂಮಿಯ ಅಗತ್ಯವೇಕಿತ್ತು? ಮಾನಸ ಸೃಷ್ಟಿಯಲ್ಲಿ ಮುಗಿಲಿಗೆ ಹಾರುವ ಭಾವನೆ ಕಾರ್ಯರಂಗಕ್ಕಿಳಿಯುವಾಗ ಅಡಿಗಡಿಗೆ ಎಡರು ತೊಡರುಗಳಲ್ಲಿ ಮುಗ್ಗರಿಸಿ ಬೀಳುವುದು. ಸತ್ಯ ಪ್ರಪಂಚದ ಈ ಮುಳ್ಳುಮರಗಳನ್ನೂ ಕಾಡು ಬೆಟ್ಟಗಳನ್ನೂ ಒಂದೇಟಿಗೆ ಕಿತ್ತು ಹಾಕುವುದು ಎಂತಹ ಬಲವಾದ ಭಾವನೆಗೂ ಮೀರಿದ ಕೆಲಸ.

ಬೀದರ ಭಾಗದ ಒಬ್ಬ ಒಕ್ಕಲಿಗನನ್ನು ಥಕ್ಕನೆ ಮೈಸೂರ ಒಂದು ಹಳ್ಳಿಯಲ್ಲಿ ತಂದು ನಿಲ್ಲಿಸಿರಿ. ಆತನ ಪಾಲಿಗೆ ಅದೊಂದು ವಿದೇಶವಾಗಿಯೆ ಕಾಣುವುದು. ಆತನ ನಡವಳಿ ಬೇರೆ, ತಿಂಡಿ ಬೇರೆ, ಭಾಷೆ ಬೇರೆ, ದನಿ ಬೇರೆ, ಉಚ್ಚಾರ ಬೇರೆ; ಹೆಚ್ಚೇನು, ಒಂದು ವಸ್ತುವಿಗೆ ಆತನೂ ಇಲ್ಲಿಯವರೂ ಹೇಳುವ ಶಬ್ದಗಳೂ ಬೇರೆ! ಬಿಳಿಬಟ್ಟೆಯ ಸುಶಿಕ್ಷಿತರನ್ನು ಕುರಿತು ನಾನು ಮಾತನಾಡುತ್ತಾ ಇಲ್ಲ. ಇದೇ ಸಮಸ್ಯೆಯನ್ನು ಮೊನ್ನೆಯ ನನ್ನ ಮೈಸೂರ ಸಂಚಾರದಲ್ಲಿ ಕೆಲವರು ನನ್ನನ್ನು ಕೇಳಿಯೆ ಬಿಟ್ಟರು. "ನಿಮ್ಮ ನುಡಿಗೂ ನಮ್ಮ ನುಡಿಗೂ ಏನೂ ಅಂತರವಿಲ್ಲ ನೋಡಿ. ಆದರೆ ನಿಮ್ಮ ಕಡೆಯ ಬೇರೆ ಜನರು ಈ ಕಡೆ ಬರುತ್ತಾರೆ. ಅವರು ಆಡುವುದು ನಮಗೆ ಅರ್ಥವೇ ಆಗುವುದಿಲ್ಲ. ಒಂದೇ ಕನ್ನಡ ಮಾತನಾಡುವವರಲ್ಲಿ ಇಷ್ಟು ವ್ಯತ್ಯಾಸಕ್ಕೆ ಕಾರಣವೇನು?" ಎಂದು.

ಇಂತಹ ವೈಲಕ್ಷಣ್ಯಗಳು ಎಲ್ಲ ದೇಶಗಳಲ್ಲಿಯೂ ಉಂಟು. ಇದೇನು ಕನ್ನಡದ ಹೊಸತಲ್ಲ ಎಂದು ಉತ್ತರಿಸಬಹುದು. ಆದರೆ ಈ ಉತ್ತರ ಪೂರ್ಣ ಉತ್ತರವಾಗಲಾರದು. ಕನ್ನಡದ ಈ ವ್ಯತ್ಯಾಸಗಳಿಗೂ ಉಳಿದ ಭಾಷೆ, ಜನಾಂಗಗಳ ವ್ಯತ್ಯಾಸಗಳಿಗೂ ವ್ಯತ್ಯಾಸವಿದೆ. ದಿಲ್ಲಿ-ಲಖನೊಗಳ ಉರ್ದು ಭಾಷೆಯಲ್ಲಿ ವ್ಯತ್ಯಾಸವಿರಬಹುದು. ಪುಣೆ—ನಾಗಪುರಗಳ ಮರಾಠಿಯಲ್ಲಿ ಅಂತರವಿದೆ. ಆದರೆ ಹೈದರಾಬಾದು-ಮೈಸೂರು ಕನ್ನಡಗಳಲ್ಲಿಯ ಅಂತರ ಈ ಅಂತರಗಳನ್ನು ಮೀರಿಸುವಂತಹದಾಗಿದೆ. ಇದರ ಚರಿತ್ರೆಯೇನು? ಅಂತರಂಗವೇನು?

ಇಂದಿನ ಕರ್ನಾಟಕದಲ್ಲಿ ಸ್ಥೂಲಮಾನದಿಂದ ಎರಡು ವೈಲಕ್ಷಣ್ಯಗಳು ಒಡೆದು ಕಾಣುತ್ತವೆ. ಒಂದು ತುಂಗಭದ್ರೆಯ ಉತ್ತರದ ಉತ್ತರ ಕರ್ನಾಟಕ. ಇನ್ನೊಂದು ತುಂಗಭದ್ರೆಯ ದಕ್ಷಿಣದ ದಕ್ಷಿಣ ಕರ್ನಾಟಕ. ಈ ಎರಡು ಭಾಗಗಳ ಸಂಸ್ಕೃತಿಯಲ್ಲಿ ಧಾರಾಳವಾದ ವ್ಯತ್ಯಾಸಗಳು ಮೈದೋರುವುವು. ತುಂಗಭದ್ರೆಯ ಉತ್ತರಕ್ಕೆ ಹೋದಹೋದಂತೆ ಕನ್ನಡದ ಭಗ್ನತೆಯನ್ನು, ಕನ್ನಡದ ವಿಕಾರವನ್ನು, ಕನ್ನಡದ ವಿರೂಪವನ್ನು ಕಾಣುವಂತೆ ದಕ್ಷಿಣಕ್ಕೆ ಹೋಗುವಾಗ ಕನ್ನಡದ ಭದ್ರತೆಯನ್ನು, ಕನ್ನಡದ ಸಾಕಾರವನ್ನು, ಕನ್ನಡದ ಸುರೂಪವನ್ನು ನಿರುಕಿಸಬಹುದಾಗಿದೆ. ಮೈಸೂರಿನ ಒಕ್ಕಲಿಗನು ಆಡುವ ಕನ್ನಡ ಅಶುದ್ಧವಾಗಿರಬಹುದು, ಅಸಂಸ್ಕೃತವಾಗಿರಬಹುದು. ಆದರೂ ಅದರಲ್ಲಿ ಒಂದು ವಿಧದ ಸೊಬಗು ಇದೆ, ಶುದ್ಧತೆ ಇದೆ, ವೈವಿಧ್ಯವಿದೆ, ಶಬ್ದ ಸಂಪತ್ತಿ ಇದೆ, ಸೂಕ್ಷ್ಮತೆ ಇದೆ. ಇದಕ್ಕೆ ಪ್ರತಿಯಾಗಿ ಉತ್ತರ ಕರ್ನಾಟಕದ ಆಚೆಯ ತುದಿಗೆ ಹೋಗಿ ಸುಶಿಕ್ಷಿತರು ಕೂಡ ಆಡುವ ಮಾತುಗಳನ್ನು ಪರೀಕ್ಷಿಸಿರಿ; ಕನ್ನಡದ ಆ ಇಂಪು ಸೊಂಪು, ನಯ ಸೂಕ್ಷ್ಮಗಳ ಮಾತಂತಿರಲಿ. ಕನ್ನಡದ ಕುರೂಪವೂ ಕಟುತ್ವವೂ ದಾರಿದ್ರ್ಯವೂ ನಿಮ್ಮನ್ನು ಕಠೋರವಾಗಿ ಇದಿರಿಸಿ ಅಟ್ಟಿಕೊಂಡು ಬರುವುದು!

ಈ ವ್ಯತ್ಯಾಸವೇಕೆ? ಇಷ್ಟು ವೈಚಿತ್ರ್ಯವೇಕೆ? ಆ ನಾಡಾವುದು? ಈ ನಾಡಾವುದು? ಅದೇನು ಕನ್ನಡ ಮಲತಾಯಿಯ ಬಸುರಲ್ಲಿ ಬಿದ್ದು ಬಂದ ಭಾಗವೆ? ಕನ್ನಡದ ಬಂಜೆನೆಲವೆ? ಪುಲಕೇಶಿಯ ನಾಡಾವುದು? ನೃಪತುಂಗನು ಕನ್ನಡದ ಗುಡಿಯನ್ನು ಮೆರಸಿದುದು ಎಲ್ಲಿ? ರನ್ನ ಬಾಳಿದುದೆಲ್ಲಿ? ಪಂಪ—ನಾಗವರ್ಮರು ಬೆಳೆದುದು ಎಲ್ಲಿ? ವೀರನಾರಾಯಣನ ಕಿಂಕರ ಗುಡಗುಡಿಸಿದುದೆಲ್ಲಿ? ಕಾಲನ ಒಡಲಲ್ಲಿ ಇಣಿಕಿ ನೋಡಿ. ಶಾಸನಗಳೋ? ಉತ್ತರ ಕರ್ನಾಟಕದ ಶಿಲಾಶಾಸನಗಳೊ! ನಿಜಾಮ ಕರ್ನಾಟಕದ ಶಿಲಾಶಾಸನಗಳೋ! ಒಂದೊಂದೂ ಕಾವ್ಯ! ರಮ್ಯವಾದ ಕಾವ್ಯ! ಸರಸವಾದ ಕಾವ್ಯ! ಮಹಾಕವಿಗಳ ಕೃತಿಗಳೆನಿಸಿ ಕೀರ್ತಿತರುವಂತಹ ಕಾವ್ಯ! ಅಂತಹ ನಾಡು ಹೀಗೇಕೆ? ಈ ಬನ್ನವೇಕೆ? ಈ ಬವಣೆ ಏಕೆ?

ದಕ್ಷಿಣೋತ್ತರ ಕರ್ನಾಟಕಗಳ ಈ ಸಾಂಸ್ಕೃತಿಕ ವ್ಯತ್ಯಾಸಗಳನ್ನು, ಘೋರವಾದ ವ್ಯತ್ಯಾಸಗಳನ್ನು ಸಮರ್ಪಕವಾಗಿ ಸ್ಪಷ್ಟೀಕರಿಸಲು ಚರಿತ್ರೆಯಲ್ಲದೆ ಬೇರಾವ ಸಾಧನವೂ ಸಹಾಯಕಾರಿಯಾಗಲಾರದು. ಹನ್ನೊಂದು ನೂರು ವರ್ಷಗಳ ಹಿಂದೆ ಕಾವೇರಿಯಿಂದ ಗೋದಾವರಿಯ ವರೆಗೆ ಅಖಂಡವಾಗಿ ಚಾಚಿದ ಕನ್ನಡನಾಡು, ಆರೇಳು ಶತಮಾನಗಳ ಆಚೆಯವರೆಗೆ ಒಂದು ಜೀವ, ಒಂದು ಉಸಿರು, ಒಂದು ಮಿಡಿತ ಎಂಬುದಾಗಿ ಅಭಿನ್ನವಾದ ಕನ್ನಡ ಭಿನ್ನವಾದುದೆಂತು? ಭಿನ್ನ ಭಿನ್ನ ವಾದುದು ಹೇಗೆ?

ವಿಜಯನಗರ ಸಾಮ್ರಾಜ್ಯ ಕರ್ನಾಟಕ ಚರಿತ್ರೆಯ ಒಂದು ಹೆಗ್ಗುರುತು. ಕರ್ನಾಟಕ ಸಂಸ್ಕೃತಿಯ ಪರಮಾವಧಿ. ಕನ್ನಡ ವೈಭವದ ವಿಜೃಂಭಣೆ. ಆದರೆ ಇದೆಲ್ಲವೂ ಯಾರಿಗೆ? ದಕ್ಷಿಣ ಕರ್ನಾಟಕಸ್ಥರಿಗೆ. ತುಂಗಭದ್ರೆಯ ಈಚೆಯ ಕನ್ನಡಿಗರಿಗೆ. ಆಚೆಯ ವರಿಗೆ? ತೆಂಕಣ ಕನ್ನಡಿಗರು ಈ ಹಬ್ಬವನ್ನು ಅಬ್ಬರಿಸುತ್ತಿರುವಾಗ ಬಡಗಣವರು ಪಾರತಂತ್ರ್ಯದ ದೇಶದಲ್ಲಿ ಸ್ವಸಂಸ್ಕೃತಿಗೆ ಎರವಾಗುತ್ತ ದಾಸ್ಯದಲ್ಲಿ ಕುದಿಯುತ್ತಿದ್ದರು! ಕನ್ನಡ ಜೀವ ಒಂದಿದ್ದುದು ಎರಡಾಯಿತು. ಎರಡು ನಾಲ್ಕಾಯಿತು. ಕನ್ನಡದ ಎರಡು ಕಣ್ಣುಗಳು ಒಂದರಲ್ಲಿ ಆನಂದಕಣ. ಇನ್ನೊಂದರಲ್ಲಿ ಕಂಬನಿ!

ಮುಂದೆ ಮೂರು ನೂರು ವರ್ಷಗಳು ಕಳೆದವು. ಮೇಲು ಮನೆಯ ನಂದಾದೀಪ ಮೊದಲೇ ನಂದಿತ್ತು. ಕೆಳ ಮನೆಯದು ಅದನ್ನೇ ಹಿಂಬಾಲಿಸಿತು. ಇದ್ದ ಬದ್ದ ಚೈತನ್ಯವೂ ಕುಂದಿತು. ಅತ್ತ ಇತ್ತ ಎತ್ತಲೂ ಕತ್ತಲೆ. ನಿರ್ಗತಿಕತೆ, ದಿಗ್ಭ್ರಾಂತಿ. ಕನ್ನಡಜೀವ ಬದುಕಿದೆಯೊ? ಉಸಿರಾಡುತ್ತಿದೆಯೊ?

ಇನ್ನೊಂದು ಮೂರು ನೂರು ವರುಷಗಳು ಉರುಳಿದುವು. ಹೊಸಗಾಳಿ ಬೀಸಿತು. ಮತ್ತೆ ಚೈತನ್ಯ ಸುಳಿಯಿತು. ಭಾಷೆ, ಸಾಹಿತ್ಯ, ಸಂಸ್ಕೃತಿ, ಸಾಮ್ರಾಜ್ಯ, ತನ್ನತನದ ಅರಿವು ಮರಳಿತು; ವಿಕಲಾಂಗವಾದ ನಿಶ್ಚೇತನವಾದ ಉತ್ತರ ಹೆಚ್ಚು ಬಲಹೀನವಾದುದರಿಂದ ದಕ್ಷಿಣದಲ್ಲಿ ಈ ನವಚೈತನ್ಯಕ್ಕೆ ನೂತನ ಸ್ಫೂರ್ತಿಗೆ ಹೆಚ್ಚು ಅವಕಾಶವಿದ್ದಂತೆ ಭಾಸವಾಯಿತು. ಭಾಷೆ, ಸಂಸ್ಕೃತಿ, ಪರಂಪರೆ, ರಾಜ್ಯಾಧಿಕಾರಿಗಳ ಭದ್ರಾಧಾರವುಳ್ಳ ದಕ್ಷಿಣಕ್ಕೆ ಅಭಿಮುಖವಾಗಿ ಎಲ್ಲರ ದೃಷ್ಟಿಗಳು ಕೆಲ ಕಾಲ ಹೊರಳಿ ನಿಂತುವು. ಕನ್ನಡ ಜೀವವೆಲ್ಲಿ? ಆಶೋತ್ತರವೆಲ್ಲಿ? ಉದ್ಧಾರವೆಲ್ಲಿ?

ಅಖಿಲ ಕರ್ನಾಟಕದಲ್ಲಿ ಕನ್ನಡ ಚಳವಳಿಯನ್ನು ಮಾಡಬೇಕಾಗಿದೆ! ಅದಕ್ಕೋಸುಗ ಅಖಂಡವಾಗಿ ಹೋರಾಡಬೇಕಾಗಿದೆ. ಉತ್ತರವಾಗಲಿ ದಕ್ಷಿಣವಾಗಲಿ ಇಂದಿನ ಕನ್ನಡ ಚಳವಳಿ ಊರಿ ನಿಂತುದು ಅಲ್ಲಲ್ಲಿಯ ಕೆಲವು ಧ್ಯೇಯವಾದಿಗಳ, ಸಾಹಸಿಗರ, ದಿಟ್ಟರ ಭುಜಗಳ ಮೇಲೆ. ಪ್ರಪಂಚ ಪಂಡಿತರ, ವ್ಯವಹಾರ ಚತುರರ ಧುರಂಧರ ಜೀವನ ಗತಿಯಲ್ಲಿ ಕನ್ನಡಕ್ಕೆ ಇನ್ನೂ ತನ್ನದಾದ ಸ್ಥಾನ ದೊರೆತಿರುವುದಿಲ್ಲ. ಇಂದಿನ ಜನಜಂಗುಳಿಯ ಸಂತೆಯಲ್ಲಿ ನಮ್ಮ ನೆಲದಲ್ಲಿ ಹುಟ್ಟಿ ಬೆಳೆದು ನಮ್ಮ ಜೀವನಾಧಾರವಾದ ವಸ್ತುವಾಗಿರದೆ ಎಲ್ಲಿಂದಲೊ ಕಡ ತಂದು ಮಾರಾಟಕ್ಕೆ ಇಟ್ಟ ಒಡವೆಯಾಗಿದೆ ಈ ಕನ್ನಡ! ಅಂತೆಯೆ ಅದು ಎಲ್ಲರ ಮನಸ್ಸನ್ನು ತತ್ಕಾಲ ಎಳೆದುಕೊಳ್ಳುತ್ತಿಲ್ಲ. ಅದಕ್ಕೋಸುಗ ಪ್ರಚಾರಕಾರ್ಯ ಆವಶ್ಯಕವಾಗಿದೆ. ಕನ್ನಡನಾಡಿನವರಾಗಿ ಕನ್ನಡಿಗರೆನಿಸಿಕೊಳ್ಳುವವರ ಉಸಿರು ಕನ್ನಡವಾಗಿಲ್ಲ! ಕರ್ನಾಟಕರ ಎದೆಗಳನ್ನು ಮೀಟುತ್ತಿರುವುದು ಕನ್ನಡ ಜೀವವಲ್ಲ!

ಕನ್ನಡ ಜೀವವಿಲ್ಲದೆ ಏಸು ಸಂಘಗಳನ್ನು ನಿರ್ಮಿಸಿದರೇನು, ಏಸು ಸಂಸ್ಥೆಗಳನ್ನು ಕಟ್ಟಿದರೇನು? ಇದೆಲ್ಲವೂ ಬಹಿರಂಗ ಶೃಂಗಾರವಾಯಿತಲ್ಲದೆ ಅಂತರಂಗ ಸಂಸ್ಕಾರವಲ್ಲ. ಕನ್ನಡಿಗರ ಹೃದಯ ಪರಿವರ್ತನೆಯಾಗಬೇಕು. ಕನ್ನಡ ಅವರ ಜೀವನದ ಮುಡಿಪು ಮೀಸಲಾಗಬೇಕು. ಅದೀಗ ಆಗಿದೆಯೆ?

ಮೈಸೂರಲ್ಲಿ, ಕನ್ನಡದ ಅರಸುತನವನ್ನು ಉಪಭೋಗಿಸುವ ಮೈಸೂರಲ್ಲಿಯೂ ಮಿಕ್ಕೆಡೆಯಂತೆ ಕನ್ನಡ ಚಳವಳಿ ನಡೆಯಬೇಕಾಗಿದೆ! ಅಲ್ಲಿಯ ಕನ್ನಡ ಚಳವಳಿ ಕೆಲವು ಧ್ಯೇಯವಾದಿಗಳಲ್ಲದೆ ಜನಸಾಮಾನ್ಯರ ಅಂತರಾಳಕ್ಕೆ ಇನ್ನೂ ಇಳಿದಿಲ್ಲ! ಮೈಸೂರ ಜನರೆಲ್ಲರೂ ಕನ್ನಡವನ್ನು ಮಾತನಾಡುತ್ತಿರಬಹುದು, ಬೇರೆಯವರಿಗಿಂತ ನಯವಾದ ಸಂಸ್ಕೃತವಾದ ಮಾತನಾಡುತ್ತಿರಬಹುದು. ಆದರೆ ನಾಲಗೆಯನ್ನು ಕುಣಿಸುತ್ತಿರುವಂತೆ ಕನ್ನಡ ಅವರೆಲ್ಲರ ಒಳಬಗೆಯನ್ನು ಕುಣಿಸುತ್ತಿದೆಯೆ? ಮೈಸೂರಲ್ಲಿ ವಿಶ್ವವಿದ್ಯಾನಿಲಯವಿದ್ದರೂ ಅಲ್ಲಿ ಕನ್ನಡಕ್ಕೆ ಸ್ಥಾನವೆಷ್ಟು? ಪ್ರಮಾಣವೆಷ್ಟು?

ಭೀಮೆಯಿಂದ ಕಾವೇರಿಯವರೆಗೆ, ಹೈದರಾಬಾದಿನಿಂದ ಮೈಸೂರ ವರೆಗೆ ಅಸ್ತವ್ಯಸ್ತವಾಗಿ ಹಬ್ಬಿದ ಕನ್ನಡ ವಿಶಾಲವಾದ ಒಂದು ಪಾಳು ದೇಗುಲ; ಕೆಲಭಾಗ ಉಧ್ವಸ್ತವಾಗಿದೆ, ಕೆಲಭಾಗ ಮುಕ್ಕಾಗಿದೆ, ಕೆಲಭಾಗ ಭದ್ರವಾಗಿದೆ. ಅತ್ತಿತ್ತಲು ಗುಂಪು ಗುಂಪಾಗಿ ಉತ್ಸಾಹಿಗಳು ಕೂಡುತ್ತಿರುವರು. ಅಲ್ಲಿ ಕಟ್ಟಬೇಕು, ಇಲ್ಲಿ ಜೀರ್ಣೋದ್ಧಾರ ಮಾಡಬೇಕು ಎಂದು ಹವಣಿಸುತ್ತಿರುವರು. ಕೆಲವೆಡೆ ಜಾತ್ರೆಗಳೂ ನೆರೆಯುತ್ತಿರುವುವು. ಉತ್ಸವ ಮೂರ್ತಿಯ ಮೆರವಣಿಗೆಯೂ ನಡೆದಿದೆ. ಆದರೆ ಗರ್ಭಗೃಹ ಇನ್ನೂ ಬರಿದೇ ಬರಿದು. ಅಲ್ಲಿಂದ ಸ್ಥಾನಚ್ಯುತ ಳಾದ ದೇವಿಯನ್ನು ಕೆಲವರು ಹುಡುಕುತ್ತಲಿದ್ದಾರೆ. ಇನ್ನೂ ಆ ವಿಗ್ರಹದ ಸುಳಿವೆ ಸಿಕ್ಕಲೊಲ್ಲದು. ಮೂರ್ತಿಯಿಲ್ಲದೆ ಮಂದಿರದ ಪ್ರಾಣವೆಲ್ಲಿ?

ಕನ್ನಡದ ದೇವಿಯ ಪ್ರಾಣಪ್ರತಿಷ್ಠೆಯಾಗದೆ ಕರ್ನಾಟಕದಲ್ಲಿ ಕನ್ನಡ ಜೀವ ಬಾಳಿ ಬೆಳೆಗದು. ದಿವ್ಯವಾದ, ಭವ್ಯವಾದ, ತೇಜೋಮಯವಾದ ಕನ್ನಡ ಸಂಸ್ಕೃತಿ ಜ್ಯೋತಿ ಈ ದೇವಿ. ಪಾಳು ದೇಗುಲ ವಾಗಬಲ್ಲ ಕಲ್ಲುಮಣ್ಣಿನ ಗುಡಿಗಳಲ್ಲಿ ನೆಲಸಲೊಲ್ಲಳು ಇವಳು, ಅಪಾರ ಭಕ್ತಿ ಪ್ರವಣದಿಂದ ಬಹಿರ್ಮುಖವಾಗಿ ಕಠೋರ ಕಾರ್ಯ ನಿಷ್ಠೆಯಿಂದ ಅಂತರ ಭೇದ್ಯವಾದ ಕನ್ನಡ ಕರ್ಮಯೋಗಿಗಳ ವಜ್ರಶಾಲೆಗಳಿಂದ ರಚಿಸಲಾದ ಅಮರ ಮಂದಿರವೆ ಇವಳ ಅಚಲ ವಾಸಸ್ಥಳ. ಇಂತಹ ನಿವಾಸ ತನಗಾಗಿ ನಿರ್ಮಾಣವಾಗುವುದೆ, ಇಂತಹ ಕರ್ಮಯೋಗಿಗಳು ತನಗೆ ಸಿಕ್ಕುವರೆ ಎಂದು ಆ ದೇವಿ ಹಂಬಲಿಸುತ್ತಿರುವಳು, ಹಾತೊರೆಯುತ್ತಿರುವಳು.

ಕನ್ನಡಜೀವ ಇಂತಹ ಕರ್ಮಯೋಗಿಗಳ ಕೈಯಲ್ಲಿದೆ, ಕನ್ನಡದ ಏಳುಬೀಳುಗಳು ಇವರ ಬಲಾಬಲವನ್ನು ಅವಲಂಬಿಸಿವೆ. ಕನ್ನಡಕ್ಕಾಗಿ ಸರ್ವಸ್ವವನ್ನು ಧಾರೆಯೆರೆದು ದುಡಿಯಲು ಸಿದ್ಧರಾದ ಇಂತಹ ಕನ್ನಡ ಕರ್ಮಯೋಗಿಗಳ ಅಮರ ಸಂಘವೊಂದು ಉದಯಿಸಲಿದೆ, ಉದಯಿಸಬೇಕಾಗಿದೆ. ಇಂತಹ ಬಳಗವೊಂದು ಬೆಳೆಯಬೇಕಾಗಿದೆ. ಅಂದು, ಅಂದೇ ಅಂದು 'ಬದುಕಿತೆಲೆ ಕನ್ನಡ ಜೀವ' ಎಂದು ಒಕ್ಕೊರಲ ವಿಜಯರಾಗವನ್ನು ಕನ್ನಡಿಗರೆಲ್ಲರೂ ಹಾಡಬಲ್ಲರು. ಅದುವೆ ಕನ್ನಡದ ನೈಜ ಏಕೀಕರಣ. ಇಂದಿನ ಕಲ್ಪನೆಯ ಸತ್ಯಸಂಕಲ್ಪವದು, ಈಗಿನ ಭಾವಲೋಕದ ಅನುಭಾವ ಸೃಷ್ಟಿಯದು!

ಕನ್ನಡ ಸುದ್ದಿ

ಕರ್ನಾಟಕ ಶಿಕ್ಷಣ ಪರಿಷತ್ತು

ಇದೇ ಡಿಸೆಂಬರ್ ೭ ಮತ್ತು ೮ನೆಯ ತಾರೀಖುಗಳಲ್ಲಿ ನೋಲೆ ಕಂಡ ಪರಿಷತ್ತು ಅಹಮ್ಮದಾಬಾದ ಕಲಾಶಾಲೆಯ ಪ್ರಿನ್ಸಿಪಾಲರವರಾದ ಡಾ। ಕೂರ್ಕೆ. ಆರ್. ವಿ. ರಾವ್. ಎಂ.ಎ., ಪಿಎಚ್.ಡಿ. ಅವರಅಧ್ಯಕ್ಷತೆಯಲ್ಲಿ ಸೇರುವುದಾಗಿಯೂ ಬೊಂಬಾಯಿ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀ. ಬಿ. ಜಿ. ಖೇರರವರು ಪರಿಷತ್ತಿನ ಪ್ರಾರಂಭೋತ್ಸವ ನೆರವೇರಿಸುವುದಾಗಿಯೂ ತಿಳಿಯಬರುತ್ತದೆ.

ಸೆನೆಟ್ಟಿನಲ್ಲಿ ಕನ್ನಡ ಭಾಷಣ

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿನ ಸಭೆ ಬೆಂಗಳೂರಿನಲ್ಲಿ ನವೆಂಬರ್ ೨೬ನೆಯ ತಾರೀಖು ನಡೆಯಿತು. ಶಿವಮೊಗ್ಗದ ಶ್ರೀ. ಭೂಪಾಳಂ ಚಂದ್ರಶೇಖರಯ್ಯನವರು ಕನ್ನಡದಲ್ಲಿ ಭಾಷಣ ಮಾಡಿದರೆಂದು ತಿಳಿಯಬರುತ್ತದೆ.

'ಕುಮಾರವ್ಯಾಸ ಬಳಗ': ಸಂಘ ಸ್ಥಾಪನೆ

ಈ ಸಂಘ ನವೆಂಬರ್ ೨೮ರಲ್ಲಿ ಗದುಗಿನಲ್ಲಿ ಸ್ಥಾಪಿತವಾಯಿತು. 'ಕನ್ನಡ ನುಡಿ'ಯ ಸಂಪಾದಕರಾದ ಶ್ರೀ. ಅ. ನ. ಕೃಷ್ಣರಾಯರು ಪ್ರಾರಂಭ ಭಾಷಣ ಮಾಡಿದರು.

ಆಧುನಿಕ ನೃತ್ಯ

ಶ್ರೀ. ಶ್ರೀನಿವಾಸ ಕುಲಕರ್ಣಿ, ಬಿ. ಎ., ಧಾರವಾಡ.

ನಮ್ಮ ಆಧುನಿಕಸಾಹಿತ್ಯವು ವಿವಿಧಮಾರ್ಗಗಳಲ್ಲಿ, ಹೊಸ ಬಗೆಯಲ್ಲಿ, ಸ್ವತಂತ್ರ ರೀತಿಯಲ್ಲಿ ಚಲಿಸುತ್ತಿರುವಂತೆ ನರ್ತನದ ಗತಿಗಮ್ಯಗಳೂ ನಮ್ಮ ಜನಜೀವನದಷ್ಟೇ ವಿಶಾಲವಾಗಬೇಕು ಎಂಬ ಮಾತನ್ನನುಸರಿಸಿ ಎರಡು ಮಾತು ಬರೆಯಬೇಕೆಂದಿದ್ದೇನೆ.

ಸುಮಾರು ೫ ವರ್ಷಗಳ ಹಿಂದೆ ಮದ್ರಾಸಿನಲ್ಲಿ ಭಾರತೀಯ ನೃತ್ಯ ಕಲಾ ಪ್ರವೀಣರಾದ ಉದಯಶಂಕರರ ನರ್ತನವಾಯಿತು. ಆ ಕಾಲಕ್ಕೆ ಅವರ ನರ್ತನಗಳಲ್ಲಿಯ ಸ್ವಾತಂತ್ರ್ಯವನ್ನು ಕಂಡು ಕೆಲವರಿಗೆ ವ್ಯಥೆಯಾಯಿತು. ತನ್ನ ಊಹಾಪೋಹಗಳಿಂದ ಕಲ್ಪಿಸಿಕೊಂಡ ನರ್ತನಗಳನ್ನು ಭಾರತೀಯ ನೃತ್ಯವೆಂದು ಪರರಾಷ್ಟ್ರಗಳಲ್ಲಿ ಹೇಳುವುದು ಭಾರತೀಯ ನೃತ್ಯಕಲೆಯ ಅಪಪ್ರಚಾರವೆಂದೂ ಕೆಲವರು ಅವರನ್ನು ಕಟುತರವಾಗಿ ಟೀಕಿಸಿದರು. ಅಂದಿನ ಟೀಕೆಯ ಒಂದು ತುಣುಕನ್ನು ತಮ್ಮೆದುರಿನಲ್ಲಿ ಇಡಬೇಕೆಂದಿದ್ದೇನೆ.

'It will be clear that Indian Dances have an elaborate technique and that nothing is left to chance or the whim of the performer and that every movement and gesture from the simplest to the most complex is predetermined. It is the duty of the dancer to learn and train himself to execute these with grace and fidelity. A dancer could no more guess a movement or gesture or invent his own than a musician could guess or invent Raga and Tala.'

ನರ್ತನದಂತಹ ಪರಂಪರಾಗತವಾಗಿ ಬಂದ ಶಾಸ್ತ್ರಗಳ ಬಗ್ಗೆ ಸ್ವಾತಂತ್ರ್ಯವನ್ನು ವಹಿಸುವುದು ತುಂಬಾ ವಿಘಾತುಕವಾದುದು ಎಂದು ಇವರ ಅಭಿಪ್ರಾಯ. ನರ್ತನದ ಪ್ರತಿಯೊಂದು ಹಾವಭಾವವೂ, ನಿಲುವು ಭಂಗಿಯೂ ಭರತನ ನಾಟ್ಯಶಾಸ್ತ್ರದಂತಹ ಗ್ರಂಥಗಳಲ್ಲಿ ವಿಸ್ತೃತವಾಗಿ, ವಿವರವಾಗಿ, ಅಷ್ಟೇ ಸೂಕ್ಷ್ಮವಾಗಿ ವಿವರಿಸಲ್ಪಟ್ಟಿರುವಾಗ ಹೊಸ ರೀತಿಯ ಚಲನವಲನಗಳನ್ನು ಅಂಗವಿನ್ಯಾಸಗಳನ್ನು ಕಲ್ಪಿಸಿಕೊಳ್ಳುವ ಆವಶ್ಯಕತೆಯೇ ಇಲ್ಲ; ನರ್ತಕನ ಕೆಲಸವೆಂದರೆ ನಾಟ್ಯಶಾಸ್ತ್ರಗಳನ್ನು ಓದಿಕೊಂಡು ಆ ಭಾವಭಂಗಿಗಳಲ್ಲಿ ನಯ ಹಾಗು ಮಾರ್ದವಗಳನ್ನು ತರಲು ಯತ್ನಿಸುವುದು ಮಾತ್ರ ಎಂದು ಇವರ ಮತ.

ಇದೂ ಒಂದು ರೀತಿ. ಹೊಸದನ್ನು ಹುಟ್ಟಿಸುವ ಹುಮ್ಮಸ್ಸಿನಲ್ಲಿ ನಮ್ಮಲ್ಲಿದ್ದುದನ್ನು ಕಳೆದುಕೊಳ್ಳುವುದು ಬೇಡ. ನಮ್ಮಲ್ಲಿ ಏನಿದೆ ಎಂಬುದನ್ನು ನಾವು ತಿಳಿದುಕೊಳ್ಳೋಣ, ಅರಗಿಸಿಕೊಳ್ಳೋಣ ಎಂಬ ಮಾತು ಸರಿಯಾದುದೇ. ಆದರೆ ಮನುಷ್ಯನಲ್ಲಿಯ ಕರ್ತೃತ್ವಶಕ್ತಿಯನ್ನೇ ಅಲ್ಲಗಳೆದರೆ ಹೇಗೆ ?

ಕನ್ನಡಕಾವ್ಯ ಸಾಮ್ರಾಜ್ಯದಲ್ಲಿ ಕನ್ನಡಕವಿಗಳು ಮಾಡುತ್ತಿರುವ ಕ್ರಾಂತಿಯನ್ನೇ ಉದಯಶಂಕರರೂ ಹಾಗೂ ಇತರ ಆಧುನಿಕನರ್ತಕರೂ ನರ್ತನ ಪ್ರಪಂಚದಲ್ಲಿ ಮಾಡುತ್ತಲಿದ್ದಾರೆ. ಕನ್ನಡಕವಿಗಳು ಸಿಕ್ಕಾಪಟ್ಟೆಯಾಗಿ ಕವಿತೆಗಳನ್ನು ಬರೆಯುತ್ತಲಿದ್ದಾರೆ ಎಂಬ ಸೊಲ್ಲು ಈಗೀಗ ಅಡಗುತ್ತಲಿದೆ. 'ಅಯ್ಯೋ ಪದ್ಯವೇ! ಗದ್ಯವನ್ನೇ ತುಂಡು ತುಂಡಾಗಿ ಅಚ್ಚುಹಾಕಿಸಿ ಪದ್ಯವೆಂದು ಕರೆದಿದ್ದಾರೆ. ಒಂದು ಛಂದಸ್ಸೇ, ಒಂದು ಅಲಂಕಾರವೇ, ಒಂದು ಉಪಮೆಯೇ, ಏನಿದೆಯೆಂದು ಇದಕ್ಕೆ ಕವಿತೆ ಎನ್ನಬೇಕು ? ಎಂದು ಮೂಗುಮುರಿಯುತ್ತಲಿದ್ದ ಮಹನೀಯರು ಕನ್ನಡ ಕವನಗಳಿಗೆ ಮನ್ನಣೆ ಕೊಡುವ ಕಾಲ ಬಂದಿದೆ. ಇಂದಿನ ಕವಿತೆಗಳಲ್ಲಿಯೂ ಒಂದು ತಾಳವಿದೆ, ಒಂದು ಲಯವಿದೆ, ಒಂದು ಛಂದಸ್ಸಿದೆ, ಬಿಗುವು ಇದೆ ಎಂದು ಒಪ್ಪಿಕೊಳ್ಳುತ್ತಲಿದ್ದಾರೆ. ಕನ್ನಡ ಕವಿಗಳಿಗೆ ಸಿಗುತ್ತಲಿದ್ದ ಮನ್ನಣೆ ಕನ್ನಡ ನರ್ತಕರಿಗೂ ದೊರೆಯಬೇಕು.

ನನ್ನಮಿತ್ರರಾದ ಶ್ರೀ. ಮೇವುಂಡಿ ಮಲ್ಲಾರಿಯವರು ಈಗ ಕೆಲವು ವರ್ಷಗಳ ಹಿಂದೆ ಜಯಕರ್ನಾಟಕದಲ್ಲಿ 'ನವೀನ ವೃತ್ತಗಳು' ಎಂಬ ಲೇಖನ ಮಾಲೆಯೊಂದನ್ನು ಪ್ರಕಟಿಸುತ್ತಲಿದ್ದರು. ಆದು ಇನ್ನೂ ಅಪೂರ್ಣವಾಗಿಯೇ ಉಳಿದಿದೆ. ಆದರಲ್ಲಿ ನಮ್ಮ ಆಧುನಿಕ ಕವನಗಳನ್ನು ಷಟ್ಪದಿ ಹಾಗು ವೃತ್ತಗಳ ರೀತಿಯಲ್ಲಿ ವಿಭಾಗಿಸಿದ್ದಾರೆ. ಯಾವುದೇ ಒಂದು ಆಧುನಿಕ ಕವನವನ್ನು ತೆಗೆದುಕೊಂಡು ವಿಭಜಿಸಿ ನೋಡಿದರೆ ಕುಸುಮ ಷಟ್ಪದಿಯ ಲಘುಚರಣ, ಶರಷಟ್ಪದಿಯ ದೀರ್ಘಚರಣ, ಪರಿವರ್ಧಿನಿಯ ಕೆಲವು ಗಣಗಳು ಕೂಡಿ ಹೊಸ ಛಂದಸ್ಸೇ ಸಿದ್ಧವಾದದ್ದು ನಮಗೆ ಕಂಡುಬರುವುದು. ಹೊಸದೆಂದು ತೋರಿಕೆಗೆ ಕಂಡುಬಂದರೂ ಹಳೆಯದನ್ನು ಅದು ಸಂಪೂರ್ಣವಾಗಿ ಬಿಟ್ಟುಕೊಟ್ಟಿಲ್ಲ. ಹಳೆಯದರ ತಳಹದಿಯ ಮೇಲೆ ಹೊಸ ಮಂದಿರ ಕಟ್ಟಿದೆ ಎಂದು ನಮಗೆ ಮನವರಿಕೆಯಾಗುವುದು. ಅದೇ ಮೇರೆಗೆ ನೃತ್ಯದಲ್ಲಿ ಕೂಡ ನಾಟ್ಯ ಶಾಸ್ತ್ರಗಳನ್ನು ಓದಿಕೊಂಡು ದೇಗುಲದಲ್ಲಿಯ ವಿಗ್ರಹಗಳನ್ನು ಮನನಮಾಡಿಕೊಂಡು ಪುರಾಣ ಇತಿಹಾಸ ಪರಂಪರೆಗಳನ್ನು ಅನುಲಕ್ಷಿಸಿ, ನಮ್ಮ ಜನಜೀವನವನ್ನು ಪರಿಶೀಲಿಸಿ, ನರ್ತನಗಳನ್ನು ಸಿದ್ಧಪಡಿಸಿಕೊಂಡರೆ ಅವು ಭಾರತೀಯ ನೃತ್ಯಗಳಲ್ಲವೇನು ? ಅವುಗಳನ್ನು ಭಾರತೀಯ ನೃತ್ಯಗಳೆಂದು ಪರ ರಾಷ್ಟ್ರಗಳಲ್ಲಿ ಪ್ರದರ್ಶಿಸಿದರೆ ಭಾರತೀಯ ನೃತ್ಯದ ಅಪಪ್ರಚಾರಮಾಡಿದಂತಾಯಿತೇನು ?

ಹೊಸ ಹೊಸ ನರ್ತಕರು ಜನಿಸುತ್ತಲಿದ್ದಾರೆ. ಹೊಸ ಹೊಸ ನರ್ತನದ ರೀತಿಗಳು ಕಂಡು ಬರುತ್ತಲಿವೆ. ತಮಗೆ ಹೊಳೆದ ರೀತಿಯಲ್ಲಿ ನೃತ್ಯಗಳನ್ನು ಹೊಂದಿಸಿಕೊಳ್ಳುತ್ತಲಿದ್ದಾರೆ. ಹೀಗೆ ಕೈಕಾಲುಗಳನ್ನು ಆಡಿಸಿದರೆ, ಮೋರೆಯನ್ನು ಹೊರಳಿಸಿದರೆ ಏನು ಅಂದವಾಯಿತು, ಅರ್ಥವಿಲ್ಲದ ಹುಡುಗಾಟಿಕೆ ಎಂದು ತಿರಸ್ಕರಿಸಬೇಡಿ. ನರ್ತನದ ಎಲ್ಲ ಬಗೆಯ ಪ್ರಯೋಗಗಳನ್ನು ಸೌಹಾರ್ದದಿಂದ ನೋಡಿ ನಿಮ್ಮ ಸರಳ ಹೃದಯದ ಅಭಿಪ್ರಾಯವನ್ನು ಕೊಡಿರಿ. ಹೊಸದು ಎಂದು ಹೊಗಳುವುದೂ ಬೇಡ; ತೆಗಳುವುದೂ ಬೇಡ. ಪ್ರಗತಿಯ ದೃಷ್ಟಿಯಲ್ಲಿ ಎರಡೂ ಅಷ್ಟೇ ವಿಘಾತುಕ.

ನಮ್ಮ ನೃತ್ಯಪರಂಪರೆಗೆ ನಾವು ಹೊಸ ರೂಪು ಕೊಡಬೇಕಾಗಿದೆ, ಹೊಸ ಚೈತನ್ಯವನ್ನು ತರಬೇಕಾಗಿದೆ, ಹೊಸ ಜೀವನವನ್ನೇ ತುಂಬಿ ಹೊಸದನ್ನಾಗಿಯೇ ಮಾಡಬೇಕಾಗಿದೆ. ಅಂತೆಯೇ ಅದನ್ನು ಬೆಳೆಯಗೊಡಿ. ಈ ಸಂದರ್ಭದಲ್ಲಿ ಗುರುವರ್ಯ ಬೇಂದ್ರೆಯವರು ಕವಿತೆಯ ವಿಷಯವಾಗಿ ಹೇಳುತ್ತಲಿದ್ದ ಮಾತು ನೆನಪಿಗೆ ಬರುತ್ತದೆ. ಮಗು ಬೀಳುವುದಲ್ಲ ಎಂದು ಹಿಡಿದು ಹಾಕಿದರೆ ಅದು ನಡೆದಾಡಲು ಕಲಿಯುವುದಾದರೂ ಹೇಗೆ? ಅದರ ಪಾಡಿಗೆ ಅದನ್ನು ಕೆಲವು ಕಾಲ ಬಿಟ್ಟುಬಿಡಿರಿ. ಬಿದ್ದು ಎದ್ದು ತನ್ನದೊಂದು ನಡೆಗೆಯ ರೀತಿಯನ್ನ ತಾನು ಕಂಡು ಕೊಳ್ಳುವುದು. ನಡುನಡುವೆ ನೀವು ಅದರ ಎದುರಿನಲ್ಲಿ ನಡೆದಾಡಿ ತೋರಿಸಿರಿ. ಇಲ್ಲವೆ "ಬಿದ್ದೀಯಾ ಮೆಲ್ಲಗೆ" ಎಂದು ಎಚ್ಚರಿಕೆ ಕೊಡಿರಿ. ಮಗು ಮುಗ್ಗರಿಸಿದ ಮೇಲೆ ನಡೆದಾಡಲು ಕಲಿಯುವುದು. ನರ್ತನವೂ ಬೆಳೆಯಲಿ; ವಿವಿಧವಾಗಿ, ವಿಪುಲವಾಗಿ ಬೆಳೆಯಲಿ; ಪ್ರತಿ ಉತ್ಸವದಲ್ಲಿಯೂ ಪ್ರತಿಯೊಂದು ಸಂತೋಷ ಕೂಟದಲ್ಲಿಯೂ ನರ್ತನದ ಸೇರ್ಪಡೆಯಾಗಲಿ. ಗುಡಿಯಲ್ಲಿಯ "ನರ್ತನಸೇವಾಮವಧಾರಯ' ಎಂಬ ಪೂಜಾರಿಯ ಮಾತು ವಾಡಿಕೆಯ ಮಾತಾಗದೆ ನಿತ್ಯದ ಮಾತಾಗಬೇಕು; ಸತ್ಯವಾದ ಮಾತಾಗಬೇಕು. ಆಗ ಮಾತ್ರ ಆಧುನಿಕ ನೃತ್ಯದ ರೀತಿನೀತಿಗಳನ್ನು ನಿಷ್ಕರ್ಷಿಸಲು ಸಾಧ್ಯವಾಗುವುದು. ಮೊದಲು ಭಾಷೆಯ ಬೆಳವಣಿಗೆಯಾಗಬೇಕು; ಆಮೇಲೆ ವ್ಯಾಕರಣದ ಉಗಮವಾಗುವುದು.

ಕೃತಜ್ಞತೆ

ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುವ ಶ್ರೀ ಪಿ. ಜಿ. ಹಳಕಟ್ಟಿ ಅವರ ಚಿತ್ರದ ಪಡಿಯಚ್ಚು ಕೀರ್ತನ ಕೇಸರಿ ಶ್ರೀ. ಬಿ. ಶಿವಮೂರ್ತಿ ಶಾಸ್ತ್ರಿಗಳ ಕೃಪೆಯಿಂದ ದೊರೆತದ್ದು.

ಶ್ರೀ. ಮುದವೀಡು ಕೃಷ್ಣರಾಯರ ಚಿತ್ರದ ಪಡಿಯಚ್ಚನ್ನು ಶ್ರೀ ಗುರುನಾಥ ಜೋಶಿಯವರು ಕೊಟ್ಟು ಉಪಕಾರಮಾಡಿದ್ದಾರೆ.

ಅಖಿಲ ಕರ್ನಾಟಕ ಮಕ್ಕಳ ಕೂಟ

(ಮಕ್ಕಳ ಎರಡನೆಯ ಮಹಾಸಭೆ)

ಕಂಠಪಾಠ ಮತ್ತು ಬರವಣಿಗೆ ಸ್ಪರ್ಧೆಗಳು

ಅಖಿಲ ಕರ್ನಾಟಕ ಮಕ್ಕಳ ಕೂಟದ ಎರಡನೆಯ ಮಹಾಸಭೆಯ ಪ್ರಯುಕ್ತ ಕಳೆದ ವರ್ಷದಂತೆಯೇ ಈ ವರ್ಷವೂ ಡಿಸೆಂಬರ್ ೩ನೆಯ ವಾರದಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿದೆ. ಹೆಚ್ಚು ಹೆಚ್ಚು ಮಕ್ಕಳು ಸ್ಪರ್ಧೆಗಳಲ್ಲಿ ಭಾಗವಹಿಸಿ ಅದರ ಉಪಯೋಗವನ್ನು ಹೊಂದುವಂತೆ ಮಕ್ಕಳನ್ನು ಪ್ರೋತ್ಸಾಹಿಸಬೇಕೆಂದು ತಾಯಿ-ತಂದೆಗಳಲ್ಲೂ, ಉಪಾಧ್ಯಾಯರಲ್ಲೂ ವಿನಂತಿ.

ಕಣಜದ ಮೆಂಬರಲ್ಲದವರಿಗೆ **ಸ್ಪರ್ಧೆಗೆ ಒಂದಾಣೆಯಂತೆ** ಪ್ರವೇಶ ಧನ. **ಡಿಸೆಂಬರ್ ೮ ರೊಳಗಾಗಿ** ಪ್ರಾರ್ಥನ ಪತ್ರಿಕೆ, ಬರವಣಿಗೆ ಕಾಗದ, ಹಣ ಇವು ವ್ಯವಸ್ಥಾಪಕರಿಗೆ ತಲಪಬೇಕು.

ಕಂಠಪಾಠ ಸ್ಪರ್ಧೆ

೧ನೆಯ ಭಾಗ–೮ ವರ್ಷಗಳ ಒಳಗಿನ ಪ್ರೈ॥ ಸ್ಕೂಲು ಮಕ್ಕಳಿಗೆ

೧. ಚಂದು ಮಾಮ ಅಥವಾ ಹುಣ್ಣಿಮೆ ಹಪ್ಪಳ (ಶ್ರೀ. ರಾಜರತ್ನಂ ಅವರ 'ಕಂದನ ಕಾವ್ಯಮಾಲೆ' ಯಿಂದ); ೨. ಕುಂಟೆ (ಶ್ರೀ. ರಾಜರತ್ನಂ ಅವರ 'ತುತ್ತೂರಿ'ಯಿಂದ); ೩. ಅಂಬಾಲ್ ಅಥವಾ ಈ ಕತೆ (ಶ್ರೀ. ರಾಜರತ್ನಂ ಅವರ 'ಚುಟಕ'ದಿಂದ); ೪. ಬೆಳಗಾಯಿತು ಅಥವಾ ಮೋಟಪ್ಪ (ಕನ್ನಡಿಗರ ಕಣಜದ 'ಉಗಾದಿ ಉಡುಗೊರೆ'ಯಿಂದ); ೫. ಅಜ್ಜ—ಅಜ್ಜ (ಶ್ರೀ॥ ಟಿ. ಎಂ. ಆರ್. ಸ್ವಾಮಿಯವರ 'ಕೂಸುಮರಿ'ಯಿಂದ); ೬. ಮೊಸರು ಮಾರುವವಳು, ಉಪ್ಪಿಟ್ಟು ಅಥವಾ ಕಳ್ಳೆಪುರಿ (ಶ್ರೀ. ಟಿ. ಎಂ. ಆರ್. ಸ್ವಾಮಿಯವರ 'ಹಾವಾಡಿಗ'ದಿಂದ).

೨ನೆಯ ಭಾಗ–೮ ವರ್ಷಕ್ಕೆ ಮೇಲ್ಪಟ್ಟ ಪ್ರೈ॥ ಸ್ಕೂಲು ಮಕ್ಕಳಿಗೆ

೧. ಕಾಳಗದ ಪದ ಅಥವಾ ರಂಗಸೆಟ್ಟಿಯಲ್ಲಿ ಯಾವುದಾದರೂ ಹತ್ತು ಪದ್ಯಗಳು (ಇಲಾಖೆಯ ಹೊಸ ಮೂರನೆಯ ರೀಡರಿನಿಂದ); ೨. ಸಣ್ಣ ತಮ್ಮಣ್ಣ ಅಥವಾ ಹಾವಿನ ಹಾಡು (ಇಲಾಖೆಯ ಎರಡನೆಯ ರೀಡರಿನಿಂದ); ೩. ಶುದ್ಧ ಪೋಲಿ ಸುಬ್ಬಣ್ಣ (ಶ್ರೀ॥ ರಾಜರತ್ನಂ ಅವರ 'ತುತ್ತೂರಿ'ಯಿಂದ); ೪. ತುಂಟ ತಿಮ್ಮ; ಕುರುಡು ಚೆನ್ನಿ ಅಥವಾ ಸಾಜಿ ಶಾಸ್ತ್ರಿ (ಶ್ರೀ॥ ಟಿ. ಎಂ. ಆರ್. ಸ್ವಾಮಿಯವರ 'ಕೂಸುಮರಿ'ಯಿಂದ); ೫. ಹೊಗೆ ಬಂಡಿ ಅಥವಾ ಮುತ್ತಿನಸೆಟ್ಟಿ (ಕನ್ನಡಿಗರ ಕಣಜದ 'ಉಗಾದಿ ಉಡುಗೊರೆ'ಯಿಂದ); ೬. ಬಣ್ಣದ ಬುಗರಿ (ಕನ್ನಡಿಗರ ಕಣಜದ 'ಬಣ್ಣದ ಬುಗರಿ'ಯಿಂದ); ೭. ತಂಬೂರಿ, ಬೋರೇಗೌಡ ಅಥವಾ ಹಣ್ಕಾಯೊಡಸ್ತೀನ್ಗಂಗಮ್ಮಾ (ಶ್ರೀ॥ ಟಿ. ಎಂ. ಆರ್. ಸ್ವಾಮಿಯವರ 'ಹಾವಾಡಿಗ'ದಿಂದ).

೩ನೆಯ ಭಾಗ–ಮಿಡಲ್ ಸ್ಕೂಲ್ ಮಕ್ಕಳಿಗೆ

೧. ಶ್ರೀ॥ ಕೆ. ವಿ. ಪುಟ್ಟಪ್ಪನವರ 'ಕುಮಾರ ವ್ಯಾಸ' (ಇಲಾಖೆಯ ಹೊಸ ಕನ್ನಡ ಆರನೆಯ ಪುಸ್ತಕದಿಂದ); ೨. ಶ್ರೀ॥ ವಿ. ಸೀ. ಅವರ 'ಭಾರತ ಜಗದಾಂಬ' (ಇಲಾಖೆಯ ಹೊಸ ಕನ್ನಡ ಐದನೆಯ ಪುಸ್ತಕದಿಂದ); ೩. ಶ್ರೀ॥ ಪಂಜೆಯವರ 'ಹೊಲೆಯನ ಹಾಡು' (ಇಲಾಖೆಯ ಹೊಸ ಕನ್ನಡ ನಾಲ್ಕನೆಯ ಪುಸ್ತಕದಿಂದ); ೪. ಸಾವಿತ್ರಿ ಚರಿತ್ರೆಯ ೫ನೆಯ ಆಶ್ವಾಸದಲ್ಲಿಯ ಯಾವುದಾದರೂ ನಾಲ್ಕು ಪದ್ಯಗಳು [ಮೇಲ್ಕಂಡ ಪದ್ಯಗಳಲ್ಲಿ ಪ್ರತಿ ಸ್ಪರ್ಧೆಗೂ ಯಾವುದಾದರೂ ಒಂದು ಪದ್ಯ ಮಾತ್ರ ಆರಿಸಿಕೊಳ್ಳತಕ್ಕದ್ದು.]

ಬರವಣಿಗೆ ಸ್ಪರ್ಧೆ

೧. 'ವೀರ ಅಭಿಮನ್ಯು'—ಕೊನೆಯ ಎರಡು ಪ್ಯಾರಾ (ಇಲಾಖೆಯ ಹೊಸ ಕನ್ನಡ ಮೂರನೆಯ ರೀಡರಿನಿಂದ); ೨. 'ನಮ್ಮ ಮಹಾರಾಜರು'—ಕೊನೆಯ ನಾಲ್ಕು ಪ್ಯಾರಾ (ಇಲಾಖೆಯ ಹೊಸ ಕನ್ನಡ ಎರಡನೆಯ ರೀಡರಿಂದ); ೩. 'ಪ್ರಾಮಾಣಿಕನಾದ ಹುಡುಗ'; ಜೋಸೆಫ್ ಕತೆ—ಯಾವುದಾದರೂ ಒಂದು ಪ್ಯಾರಾ (ಇಲಾಖೆಯ ಹಳೆಯ ಮೂರನೆಯ ರೀಡರಿನಿಂದ).

ಆರ್. ಕಲ್ಯಾಣಮ್ಮ,
ಅಧ್ಯಕ್ಷರು.

ಟಿ. ಎಂ. ಆರ್. ಸ್ವಾಮಿ,
ಗೌ॥ ಕಾರ್ಯದರ್ಶಿ.

ಜೆ. ಆನಂದವಲ್ಲಿಯಮ್ಮ ಸಾಧು,
ವ್ಯವಸ್ಥಾಪಕರು,
ಅ॥ ಕ॥ ಮಕ್ಕಳ ಕೂಟದ ಸ್ಪರ್ಧೆಗಳು.

ಸಂಗೀತ

(ವಿದ್ವಾನ್ ವಾಸುದೇವಾಚಾರ್ಯರ ಉಪನ್ಯಾಸ)

[೨೭—೧೧—೧೯೩೮ನೆಯ ಸಂಜೆ ಬೆಂಗಳೂರಿನ ಸಾಹಿತ್ಯ ಪರಿಷನ್ ಮಂದಿರದಲ್ಲಿ ಸಂಗೀತಶಾಸ್ತ್ರರತ್ನ ಸಂಗೀತ ವಿದ್ವಾನ್ ಶ್ರೀಮಾನ್ ಕಾನಕಾನಹಳ್ಳಿ ವಾಸುದೇವಾಚಾರ್ಯರು ಪ್ರೊಫೆಸರ್ ಎಲ್. ರಾಮರಾವ್, ಎಂ.ಎ, ಎಫ್.ಜಿ.ಎಸ್. ಅವರ ಅಧ್ಯಕ್ಷತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸವಾಗಿ ಸಂಗೀತದ ಮೇಲೆ ಮಾಡಿದ ಭಾಷಣದ ಸಾರಾಂಶ]

ಈಗಿನ ನವನಾಗರಿಕತೆಯ ಫಲವಾಗಿ ಬೀದಿಬೀದಿಯಲ್ಲೂ ಮನೆಮನೆಯಲ್ಲೂ ಗ್ರಾಮಫೋನೂ ರೇಡಿಯೋವೂ ಇದ್ದು ಪ್ರತಿಯೊಬ್ಬರ ಕಿವಿಯಲ್ಲೂ ದೇಶವಿದೇಶಗಳ ಎಲ್ಲ ಬಗೆಯ ಸಂಗೀತವೂ ಬೀಳುತ್ತಿದೆ. ಮಕ್ಕಳ ಬಾಯಲ್ಲಿ ಕೂಡ ಸಂಗೀತಗಾರರ ಹೆಸರೂ ರೇಡಿಯೋ ಪ್ರೋಗ್ರಾಮೂ ಕೇಳಬರುತ್ತವೆ. ಸಂಗೀತದ ಇಷ್ಟು ಮಟ್ಟಿನ ವ್ಯಾಪ್ತಿಯಿಂದ ಅದಕ್ಕೆ ಕೊಂಚ ಕುಂದೂ ಆಗಿದೆಯೆನ್ನಬೇಕು. ಏಕೆಂದರೆ ಸುಬದ್ಧವೋ ಅಬದ್ಧವೋ ಆದ ಸಂಗೀತ ಎಲ್ಲರ ಬಾಯಲ್ಲೂ ಇದ್ದು ಎಲ್ಲರಿಗೂ ಪರಿಚಯವಾಗಿ ಅದರ ವಿಷಯದಲ್ಲಿ ಇರಬೇಕಾದ ಒಂದು ಉಚ್ಚಭಾವ ಹೋಗಿಬಿಟ್ಟಿದೆ. ಸಂಗೀತವೂ ಒಂದು ಶಾಸ್ತ್ರವೆ! ಅದಕ್ಕೆ ಲಕ್ಷ್ಯವೊಂದುಂಟೆ? ಅದನ್ನು ಕೃಷಿಮಾಡಿ ಸಾಧಿಸಬೇಕೇ ಎಂದು ಕೇಳುವವರೂ ಇದ್ದಾರೆ.

ತಂತಮ್ಮ ಬೇಸರವನ್ನೂ ಬಳಲಿಕೆಯನ್ನೂ ಕಳೆದುಕೊಳ್ಳುವುದಕ್ಕಾಗಿ ಪ್ರತಿಯೊಬ್ಬರೂ ತಮ್ಮ ಮನಬಂದ ರಾಗದಲ್ಲಿ ಹಾಡಿಕೊಳ್ಳುವುದು ಎಲ್ಲರಿಗೂ ತಿಳಿದ ವಿಷಯವೇ! ತಿಳಿದವರು ತಿಳಿಯದವರು, ಹಿರಿಯರು ಕಿರಿಯರು, ಮುದುಕರು ಮಕ್ಕಳು, ಹೆಂಗಸರು ಗಂಡಸರು—ಎಲ್ಲರೂ ಹಾಡಿನಿಂದ ನಲಿಯುತ್ತಾರೆ, ತಣಿಯುತ್ತಾರೆ. ಕಣದಲ್ಲಿ ಕಾಳೊಕ್ಕುವ ಬೇಸಾಯಗಾರ, ಕಲ್ಲೆತ್ತುವ ಕಲ್ಲೊಡ್ಡ-ಎಲ್ಲರೂ ತಂತಮ್ಮ ದುಡಿತವನ್ನು ಹಾಡಿಕೊಂಡು ಹಗುರಮಾಡಿಕೊಳ್ಳುತ್ತಾರೆ. ಕಾಳಸರ್ಪವೂ ಸಂಗೀತಕ್ಕೆ ತಲೆದೂಗುತ್ತದೆ. ಸಂಗೀತ ಶ್ರವಣದಿಂದ ಹಸು ಹಾಲು ಹೆಚ್ಚಾಗಿ ಕರೆಯುವುದೂ, ರೋಗ ಗುಣವಾಗುವುದೂ ಈಚಿನ ಪರಿಶೋಧನೆಯಿಂದ ತಿಳಿದುಬಂದ ಅಂಶಗಳಾಗಿವೆ. ಸೈನಿಕನೊಬ್ಬನು ಹೊಸ ಹೆಂಡತಿಯನ್ನು ಬಿಟ್ಟು ಹೋಗಲು ಮನಸ್ಸಿಲ್ಲದೆ ಯುದ್ಧಕ್ಕೆ ಬರಲು ತಪ್ಪಿಸಿಕೊಂಡನಂತೆ. ದಳಪತಿ ಅವನಿಗೆ ಶಿಕ್ಷೆ ಮಾಡುವುದಕ್ಕೆ ಬದಲಾಗಿ ಯುದ್ಧಕ್ಕೆ ಹೊರಡಬೇಕಾದ ದಿನ ಆ ಸೈನಿಕನ ಮನೆಯ ಮುಂದೆ ಯುದ್ಧ ಪ್ರಯಾಣದ ಗೀತವನ್ನು ನುಡಿಸಿದನಂತೆ. ಆ ಕಾಳಗದ ಕರೆ ಕೇಳಿದೊಡನೆಯೆ ಒಳಗಿದ್ದ ಸೈನಿಕ ಕೈದುತೊಟ್ಟು ಹೊರಟನಂತೆ. ಅಷ್ಟೇಕೆ! ನಮ್ಮವರ ಪ್ರಕಾರ ನಾದವೇ ಪರಬ್ರಹ್ಮ; ಪರಬ್ರಹ್ಮವೇ ನಾದ. ಶ್ರೀಕೃಷ್ಣ ವೇಣುಗಾನಲೋಲ; ಪರಮೇಶ್ವರ ನೃತ್ಯಲೋಲ, ನಟರಾಜ; ಬ್ರಹ್ಮ ಸಾಮಗಾನ ಪ್ರಿಯ. ನಮ್ಮ ಎಷ್ಟೋ ಸಂಸ್ಕಾರಗಳಲ್ಲಿ ಸಂಗೀತಕ್ಕೆ ಪ್ರಧಾನ ಸ್ಥಾನವಿದೆ. ವೇದಗಳನ್ನೆಲ್ಲ ಹಾಡುತ್ತಿದ್ದರು; ಋಗ್ವೇದವನ್ನು ಮೂರು ಸ್ವರಗಳಿಂದಲೂ, ಯಜುರ್ವೇದವನ್ನು ನಾಲ್ಕು ಸ್ವರಗಳಿಂದಲೂ, ಸಾಮವೇದವನ್ನು ಏಳು ಸ್ವರಗಳಿಂದಲೂ ಪಠಿಸುತ್ತಾರೆ. ಶತಪಥ ಬ್ರಾಹ್ಮಣ ತೈತ್ತರೀಯೋಪನಿಷತ್ತು ಮೊದಲಾದುವಗಳಲ್ಲಿ ವೀಣೆ, ದುಂದುಭಿ ಮೊದಲಾದ ವಾದ್ಯಗಳನ್ನು ಹೇಳಿದೆ; ನೂರು ತಂತಿಯ ವೀಣೆಯ ಪ್ರಸಂಗವಿದೆ.

ಪಶುಪಕ್ಷಿಗಳಲ್ಲಿ ಒಂದೊಂದರಲ್ಲಿ ಒಂದೊಂದು ಸ್ವರ ಮಾತ್ರ ನುಡಿಯುತ್ತದೆ. ಮನುಷ್ಯನಲ್ಲಿ ಎಲ್ಲ ಸ್ವರಗಳೂ ನುಡಿಯುತ್ತವೆ. ಈ ಸ್ವರಗಳ ಬಗೆ ಬಗೆಯ ವಿನ್ಯಾಸದಿಂದ ಸಂಗೀತ ಹುಟ್ಟುತ್ತದೆ. ಸಂಗೀತವೆಂದರೆ ಚೆನ್ನಾಗಿ ಹಾಡುವುದು ಎಂದರ್ಥವಲ್ಲ. ಗಾನ ವಾದನ ನರ್ತನಗಳ ಸಮ್ಮೇಳನಕ್ಕೆ ಸಂಗೀತವೆಂದು ಹೆಸರು. ತಾಳ ಅಥವಾ ಕಾಲವೇ ಸಂಗೀತಕ್ಕೆ ಮೂಲಾಧಾರ. ಭರತ ಶಾಸ್ತ್ರವೆಂದರೆ ಭಾವ ರಾಗ ತಾಳಗಳ ಶಾಸ್ತ್ರ. ಸಂಗೀತಗಾರನಿಗೆ ತಾಳಜ್ಞಾನ ರಾಗಜ್ಞಾನಗಳ ಜತೆಗೆ ಶಾಸ್ತ್ರಜ್ಞಾನವೂ ಸಾಹಿತ್ಯಜ್ಞಾನವೂ ಚೆನ್ನಾಗಿರಬೇಕು. ಸಾಹಿತ್ಯಜ್ಞಾನವಿಲ್ಲದೇ ಹಾಡಿದರೆ ಅಪಾರ್ಥವಾಗಿ ರಸಾಭಾಸವಾಗುತ್ತದೆ.

ನಮ್ಮ ಮೈಸೂರು ರಾಜಮನೆತನದವರು ಸಂಗೀತಕಲೆಗೆ ಅಪಾರ ಸಹಾಯ ಮಾಡಿದ್ದಾರೆ. ಅವರ ಔದಾರ್ಯ ಆಶ್ರಯಗಳಿಂದಲೇ ಕರ್ನಾಟಕ ಸಂಗೀತ ಇನ್ನೂ ಬದುಕಿದೆ. ಮುಮ್ಮಡಿ ಕೃಷ್ಣರಾಜ ವೊಡೆಯರೂ, ಚಾಮರಾಜ ವೊಡೆಯರೂ, ನಮ್ಮನ್ನಾಳುವ ಶ್ರೀ ನಾಲ್ಮಡಿ ಕೃಷ್ಣರಾಜ ವೊಡೆಯರೂ ಸಾವಿರಾರು ಸಂಗೀತಗಾರರಿಗೆ ಆಶ್ರಯವಿತ್ತು ಸಂಗೀತ ಕಲೆಯ ಬದುಕು ಬೆಳವಳಿಗೆಗಳಿಗೆ ಕಾರಣರಾಗಿ ಎಲ್ಲರ ಮೆಚ್ಚಿಕೆ ಕೊಂಡಾಟಗಳಿಗೆ ಪಾತ್ರರಾಗಿದ್ದಾರೆ.

ಪರಿಷತ್ತಿನ ಸುದ್ದಿ

ಸಾಹಿತ್ಯ ಸಮ್ಮೇಳನದ ತಾರೀಖು ಬದಲಾವಣೆ

ಇದೇ ಡಿಸೆಂಬರ್ ತಿಂಗಳು ೨೬ರಿಂದ ೨೮ರವರೆಗೆ ಹುಬ್ಬಳ್ಳಿಯಲ್ಲಿ ೧೩ನೆಯ ವೀರಶೈವ ಮಹಾಸಭೆ ನಡೆಯುವುದಷ್ಟೆ. ಅದಕ್ಕೂ ಸಮ್ಮೇಳನಕ್ಕೂ ತೊಡಕು ಉಂಟಾಗಬಾರದೆಂಬ ಉದ್ದೇಶದಿಂದ ಸಮ್ಮೇಳನದ ಆರಂಭವನ್ನು ೨೮ರಿಂದ ೨೯ಕ್ಕೆ ಮುಂದುವರಿಸಿದೆ. ಸಮ್ಮೇಳನ ೨೯, ೩೦, ೩೧ನೆಯ ತಾರೀಖುಗಳಲ್ಲಿ ನಡೆಯುವುದು. ಪರಿಷತ್ತಿನ ಸಕಲ ಸದಸ್ಯರ ವಾರ್ಷಿಕಾಧಿವೇಶನವನ್ನು (೨೯ರಿಂದ) ೩೦ಕ್ಕೆ ಮುಂದುವರಿಸಲಾಗಿದೆ.

'ಶ್ರೀ' ಯವರಿಗೆ ಅಭಿನಂದನೆ

ಬೆಂಗಳೂರಿನ 'ಮಿತ್ರ ಸಂಘ', ಬೆಳಗಾವಿಯ ಕನ್ನಡ ಸಂಘ, ಮೈಸೂರು ಮಹಾರಾಣಿ ಕಾಲೇಜಿನ ಕರ್ನಾಟಕ ಸಂಘ, ಧಾರವಾಡದ ಇತಿಹಾಸ ಸಂಶೋಧಕ ಮಂಡಲ ಈ ಸಂಸ್ಥೆಗಳು "ಶ್ರೀ" ಯವರಿಗೆ 'ರಾಜಸೇವಾಸಕ್ತ' ಎಂಬ ಬಿರುದು ಬಂದದ್ದಕ್ಕಾಗಿ ಅಭಿನಂದನ ಸೂಚಕ ನಿರ್ಣಯಗಳನ್ನು ಕಳಿಸಿದ್ದಾರೆ. ಈ ಸಂಸ್ಥೆಗಳೆಲ್ಲಕ್ಕೂ "ಶ್ರೀ"ಯವರು ತಮ್ಮ ಕೃತಜ್ಞತೆಯ ವಂದನೆಗಳನ್ನು ಈ ಮೂಲಕ ಸಲ್ಲಿಸಬಯಸುತ್ತಾರೆ.

ರಾಜಸೇವಾಸಕ್ತ "ಶ್ರೀ" ಯವರಿಗೆ ಪರಿಷತ್ತಿನ ಪರವಾಗಿ ಅಭಿನಂದನಾ ಸಭೆ

ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರಿಗೆ ನಮ್ಮನ್ನಾಳುವ ಮಹಾಸ್ವಾಮಿಯವರು 'ರಾಜಸೇವಾಸಕ್ತ' ಎಂಬ ಬಿರುದನ್ನು ದಯಪಾಲಿಸಿರುವುದಕ್ಕಾಗಿ ಪರಿಷತ್ತಿನ ಸಂತೋಷ ಅಭಿನಂದನೆಗಳನ್ನು ವ್ಯಕ್ತಪಡಿಸಲು ಪರಿಷತ್ತಿನ ಪರವಾಗಿ ಬಳ್ಳಾರಿಯಲ್ಲಿ ಸಮ್ಮೇಳನ ಸಮಯದಲ್ಲಿ ಅಭಿನಂದನ ಸಭೆ ಏರ್ಪಡಿಸತಕ್ಕದ್ದೆಂದು ಕಾ|| ನಿ|| ಮಂಡಲಿ ತೀರ್ಮಾನಿಸಿದೆ; ಮತ್ತು ಸಭೆಯ ಏರ್ಪಾಟಿನ ವಿವರಗಳನ್ನು ಗೊತ್ತುಮಾಡಲು ಅಖಿಲ ಕರ್ನಾಟಕದ ಪ್ರತಿನಿಧಿಗಳನ್ನುಳ್ಳ ಒಂದು ಸಮಿತಿಯನ್ನು ನೇಮಕ ಮಾಡಿದೆ.

ಶ್ರೀ. ಲೋಕೂರ ಅವರಿಗೆ ಅಭಿನಂದನೆ

ಪರಿಷತ್ತಿನ ಸಹಾಯಕ ವರ್ಗದ ಸದಸ್ಯರಾದ, ಬೆಳಗಾವಿನಲ್ಲಿ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಯವರಾಗಿದ್ದ ಶ್ರೀ ನಾರಾಯಣ ಸ್ವಾಮಿರಾವ್ ಲೋಕೂರ ಅವರು ಬೊಂಬಾಯಿ ಹೈಕೋರ್ಟಿನ ಜಡ್ಜ್ ರವರಾಗಿ ನೇಮಕ ಹೊಂದಿದ್ದಾರೆ. ಇದು ಕನ್ನಡಿಗರಿಗೆಲ್ಲ ಅಭಿಮಾನಾಸ್ಪದವಾದ ಸಂಗತಿ. ಶ್ರೀ ಲೋಕೂರರವರಿಗೆ ಕನ್ನಡಿಗರ ಪರವಾಗಿ ಪರಿಷತ್ತಿನ ಹೃದಯ ಪೂರ್ವಕ ಅಭಿನಂದನೆಗಳು.

ಪರಿಷತ್ತಿನ ಕಂಠಪಾಠ ಸ್ಪರ್ಧೆಗಳು.

ಸ್ಪರ್ಧೆಗಳ ಫಲಿತಾಂಶ.

ಪರಿಷತ್ತಿನ ಈ ವರ್ಷದ ಕಂಠಪಾಠ ಸ್ಪರ್ಧೆಗಳು ಇದೇ ನವೆಂಬರ್ ತಾ|| ೨೩, ೨೪, ೨೫, ೨೬ ಮತ್ತು ೨೮ನೆಯ ತಾರೀಖುಗಳಲ್ಲಿ ಬಹು ಯಶಸ್ವಿಯಾಗಿ ನಡೆದುವು. ಸ್ಪರ್ಧೆಗಳು ಪ್ರತಿ ದಿನವೂ ಸಂಜೆ ೫-೩೦ಕ್ಕೆ ಪ್ರಾರಂಭವಾಗಿ ಸುಮಾರು ೭—೩೦ರ ವರೆಗೂ ನಡೆಯುತ್ತಿದ್ದುವು; ಪರಿಷತ್ತಿನ ಸದಸ್ಯರಿಂದಲೂ ಅಭಿಮಾನಿಗಳಿಂದಲೂ, ವಿದ್ಯಾರ್ಥಿಗಳಿಂದಲೂ, ಉಪಾಧ್ಯಾಯರುಗಳಿಂದಲೂ ಮತ್ತು ಬಹುಮಂದಿ ಮಹಿಳೆಯರಿಂದಲೂ ಸಭೆ ಪ್ರತಿ ದಿನವೂ ತುಂಬಿ ತುಳುಕುತ್ತಿತ್ತು. ಮೇಲಿಂದ ಮೇಲೆ ಬರುತ್ತಿದ್ದ ಜನಸಂದಣಿಯನ್ನು ತಡೆಯಲಾಗದೆ ಕಡೆಯ ದಿನ ಸದಸ್ಯರಲ್ಲದವರಿಗೆ ಪ್ರವೇಶ ಶುಲ್ಕವನ್ನು ಹಾಕಬೇಕಾಯಿತು.

ಶ್ರೀ|| ಗಳಾದ ಎಸ್. ವಿ. ರಂಗಣ್ಣ, ಎಂ. ಎ., ವಿ. ವೆಂಕಟಾಚಾರ್, ಎಂ. ಎ., ಬಿ. ಕಾಂ., ಕೆ. ವೆಂಕಟರಾಮಪ್ಪ, ಎಂ. ಎ., ಶ್ರೀಮತಿ ಆರ್. ಕಲ್ಯಾಣಮ್ಮನವರು, ಶ್ರೀಮತಿ ಎಸ್. ನಂಜಮ್ಮನವರು, ಬಿ. ಎ., ಎಲ್. ಟಿ. ಇವರುಗಳು ಸ್ಪರ್ಧೆಗಳ ಪರೀಕ್ಷಕರಾಗಿದ್ದುಕೊಂಡು ಸಹಾಯ ಮಾಡಿದರು. ಇವರಿಗೆ ಪರಿಷತ್ತಿನ ವಂದನೆಗಳು.

ಸ್ಪರ್ಧೆಗಳಲ್ಲಿ ಗೆದ್ದ ವಿದ್ಯಾರ್ಥಿಗಳ ಹೆಸರುಗಳನ್ನು, ಬಹುಮಾನ ಪಡೆದ ಕ್ರಮದಲ್ಲಿ, ಈ ಕೆಳಗೆ ಕೊಟ್ಟಿದೆ:—

ಪ್ರೈಮರಿ ಸ್ಕೂಲ್—ಬಾಲಕರು:

೧. ಎಸ್. ನಾಗರಾಜು (ಕೋಟೆ ಪ್ರೈಮರಿ ಬಾಯ್ಸ್ ಸ್ಕೂಲು); ೨. ಚೆಟ್ಟಿಸ್ವಾಮಿ (ಕೋಟೆ ಪ್ರೈಮರಿ ಬಾಯ್ಸ್ ಸ್ಕೂಲು), ೩. ಗೋಪಿನಾಥರಾವ್ (ಸೀಗೆಬೇಲಿ ಪ್ರೈಮರಿ ಬಾಯ್ಸ್ ಸ್ಕೂಲು); ೪. ಮೋಹನ (ಬಸವನಗುಡಿ ಪ್ರೈಮರಿ ಸ್ಕೂಲು); ೫. ಗುಂಡೂರಾವ್ (ದೊಡ್ಡಮಾವಳ್ಳಿ ಪ್ರೈಮರಿ ಸ್ಕೂಲು); ೬. ಕೆಂಪಣ್ಣ (ಕೋಟೆ ಪ್ರೈಮರಿ ಸ್ಕೂಲು); ೭. ಸಿ. ಪಿ. ನಾರಾಯಣಸ್ವಾಮಿ (ಸೀಗೆಬೇಲಿ ಪ್ರೈಮರಿ ಸ್ಕೂಲು); ೮. ರುಕ್ಮಾಂಗದ (ಕೋಟೆ ಪ್ರೈಮರಿ ಸ್ಕೂಲು); ೯. ವೆಂಕಟಾಚಲ (ಬಸವನಗುಡಿ ಪ್ರೈಮರಿ ಸ್ಕೂಲು); ೧೦. ಮಲ್ಲಿಕಾರ್ಜುನಯ್ಯ (ಸೀಗೆಬೇಲಿ ಪ್ರೈಮರಿ ಸ್ಕೂಲು); ೧೧. ಭದ್ರಯ್ಯ (ಕೋಟೆ ಪ್ರೈಮರಿ ಸ್ಕೂಲು); ೧೨. ಬಸವಯ್ಯ (ಬಸವನಗುಡಿ ಪ್ರೈ|| ಸ್ಕೂಲು).

ಪ್ರೈಮರಿ ಸ್ಕೂಲ್—ಬಾಲಕಿಯರು:

೧. ಎಸ್. ಲಲಿತಮ್ಮ (ಮಲ್ಲೇಶ್ವರಂ ಮುನಿಸಿಪಲ್ ಕನ್ನಡ ಪ್ರೈಮರಿ ಗರ್ಲ್ಸ್ ಸ್ಕೂಲು.) ೨. ಎಸ್. ಲಕ್ಷ್ಮಿ (ಪ್ರೈಮರಿ ಬಾಯ್ಸ್ ಸ್ಕೂಲ್, ಕೋಟೆ), ೩. ಬಿ. ಕೆ. ಶಾರದಮ್ಮ (ಮಲ್ಲೇಶ್ವರಂ ಮುನಿಸಿಪಲ್ ಪ್ರೈಮರಿ ಗರ್ಲ್ಸ್ ಸ್ಕೂಲು) ೪. ಅಣ್ಣಮ್ಮ (ನಾರಾಯಣಶೆಟ್ಟಿಪೇಟೆ ಪ್ರೈಮರಿ ಗರ್ಲ್ಸ್ ಸ್ಕೂಲು); ೫. ಎಚ್. ಆರ್. ಚೂಡಾಮಣಿ (ಸೀಗೆಬೇಲಿ ಪ್ರೈಮರಿ ಬಾಯ್ಸ್ ಸ್ಕೂಲ್) ೬. ಚೂಡಾಮಣಿ (ಮಲ್ಲೇಶ್ವರಂ ಮುನಿಸಿಪಲ್ ಕನ್ನಡ ಪ್ರೈಮರಿ, ಗರ್ಲ್ಸ್ ಸ್ಕೂಲು); ೭. ಕಮಲ ೮. ಪುಟ್ಟಮ್ಮ, (ದೊಡ್ಡಮಾವಳ್ಳಿ ಪ್ರೈಮರಿ ಬಾಯ್ಸ್ ಸ್ಕೂಲು); ೯. ಎಂ. ಎಸ್. ಸರೋಜ (ಶೇಷಾದ್ರಿಪುರಂ ಸ್ತ್ರೀ ಸಮಾಜ); ೧೦. ಡಿ. ಜಯಮ್ಮ (ಆರ್ಯ ಬಾಲಿಕಾ ಪಾಠಶಾಲೆ, ಸುಲ್ತಾನ್ ಪೇಟೆ); ೧೧. ಎಸ್. ನಾಗರತ್ನಮ್ಮ (ಪ್ರೈಮರಿ ಬಾಯ್ಸ್ ಸ್ಕೂಲ್, ಕೋಟೆ); ೧೨. ಬಿ. ಆರ್. ಪ್ರಮೀಳಾ (ಶೇಷಾದ್ರಿಪುರಂ ಸ್ತ್ರೀ ಸಮಾಜ); ೧೩. ಎಸ್. ಚಂಪಕಾಬಾಯಿ (ಶಂಕರಪುರ ಪ್ರೈಮರಿ ಬಾಯ್ಸ್ ಸ್ಕೂಲು); ೧೪. ಇಂದಿರಮ್ಮ (ಪ್ರೈಮರಿ ಬಾಯ್ಸ್ ಸ್ಕೂಲು, ಕೋಟೆ)

ಮಿಡಲ್ ಸ್ಕೂಲ್—ಬಾಲಕರು:

೧. ಲಕ್ಷ್ಮಣರಾವ್, ೨. ಎಂ. ಪಿ. ಕೃಷ್ಣಮೂರ್ತಿ, ೩. ಬಿ. ಎಸ್. ಶ್ರೀನಿವಾಸಮೂರ್ತಿ, ೪. ಗೋಪಾಲಕೃಷ್ಣ (ಚಾಮರಾಜಪೇಟೆ ಮಿಡಲ್ ಸ್ಕೂಲ್) ೫. ಸಿ. ಕೃಷ್ಣಮೂರ್ತಿ (ಮಲ್ಲೇಶ್ವರಂ ಮಿಡಲ್ ಸ್ಕೂಲ್), ೬. ಬಿ. ಕೃಷ್ಣರಾವ್ (ಆಚಾರ್ಯ ಪಾಠಶಾಲೆ, ಬಸವನಗುಡಿ) ೭. ಎಸ್. ಶಿವನಂಜಪ್ಪ (ಎಸ್. ಎಲ್. ಎನ್. ಮಿಡಲ್ ಸ್ಕೂಲ್).

ಮಿಡಲ್ ಸ್ಕೂಲ್—ಬಾಲಕಿಯರು:

೧. ತಾರಾಬಾಯಿ (ಶ್ರೀನಿವಾಸ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಟ್); ೨. ಸಿ. ಎನ್. ಲೀಲ (ಚಾಮರಾಜಪೇಟೆ ಮಿಡಲ್ ಸ್ಕೂಲು); ೩. ಎಸ್. ರಾಜಮ್ಮ (ಸೆಂಟ್ ಥೆರಿಸ ಕಾನ್ವೆಂಟ್ ಸ್ಕೂಲು); ೪. ಟಿ. ಎಸ್. ಸರೋಜಿನಿ ದೇವಿ, ೫. ಎಚ್. ರತ್ನ, ೬. ಬಿ. ಶಾಂತ (ಶ್ರೀನಿವಾಸ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಟ್). ೭. ಲಕ್ಷ್ಮೀದೇವಮ್ಮ, ೮. ಎಂ. ಎನ್. ಅನ್ನಪೂರ್ಣ; (ಬಸವನಗುಡಿ ಮಿಡಲ್ ಸ್ಕೂಲ್). ೯. ಕೆ. ಎನ್. ಧರ್ಮಾಂಬ (ಚಾಮರಾಜಪೇಟೆ ಮಿಡಲ್ ಸ್ಕೂಲ್).

ಹೈಸ್ಕೂಲ್—ಬಾಲಕರು:

೧. ಬದರಿನಾಥ್ (ಎಸ್. ಎಲ್. ಎನ್.); ೨. ಜಿ. ಎಸ್. ಆದಿನಾರಾಯಣ. ೩. ಬಿ. ಎಸ್. ಅಶ್ವತ್ಥನಾರಾಯಣ (ಸೆಂಟ್ರಲ್). ೪. ಎ. ಜಿ. ಜಯತೀರ್ಥ, (ಎಸ್. ಎಲ್. ಎನ್.) ೫. ಜಾನ್ ವಿಲ್ಸನ್ (ಯುನೈಟೆಡ್ ಮಿಷನ್).

ಹೈಸ್ಕೂಲ್—ಬಾಲಕಿಯರು:

೧. ಪುಟ್ಟತಾಯಮ್ಮ; ೨. ಸೀತಮ್ಮ; ೩. ರತ್ನ, ೪. ತಂಗಮ್ಮ (ವಾಣಿವಿಲಾಸ ಇನ್‌ಸ್ಟಿಟ್ಯೂಟ್).

ಬೆಂಗಳೂರು ಮಾರುತಿ ಜ್ಯೂಯೆಲರಿ ಹಾಲಿನ ಒಡೆಯರು ಶ್ರೀಮಾನ್ ಎಸ್. ಶಾಮಯ್ಯನವರ ಪರ್ಯಾಯ ಪಾರಿತೋಷಿಕ (ಬೆಳ್ಳಿಯ ಬಟ್ಟಲು) ಈ ಸಲ ಒಟ್ಟಿನಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಾಣೀವಿಲಾಸ ಇನ್‌ಸ್ಟಿಟ್ಯೂಟ್‌ಗೆ ದೊರೆತಿದೆ.

ತಾ|| ೨೮—೧೧—೧೯೩೮ರ ಸಂಜೆ, ಸ್ಪರ್ಧೆಗಳು ಮುಗಿದ ಬಳಿಕ ಸ್ಪರ್ಧೆಗಳ ವ್ಯವಸ್ಥಾಪಕರಾಗಿದ್ದ ಶ್ರೀಮಾನ್ ವಿ. ಟಿ. ತಿರುನಾರಾಯಣಯ್ಯಂಗಾರ್, ಎಂ.ಎ., ಅವರು ಸಭಿಕರೆಲ್ಲರಿಗೂ ವಂದನೆಗಳನ್ನು ಸಮರ್ಪಿಸಿ, ಹೋದ ವರ್ಷಕ್ಕಿಂತ ಈ ವರ್ಷ ಕಂಠಪಾಠ ಸ್ಪರ್ಧೆಗಳಲ್ಲಿ ಒಂದಕ್ಕೆ ಎರಡರಷ್ಟು ಮಂದಿ ಬಾಲಕ ಬಾಲಕಿಯರು ಭಾಗವಹಿಸಿರುವುದು ಅತ್ಯಂತ ಸಂತೋಷದ ಸಂಗತಿಯೆಂದು ತಿಳಿಸಿ, ಹೀಗೆಯೇ ಇನ್ನು ಮೇಲೂ ಬಾಲಕ ಬಾಲಕಿಯರು ಸ್ಪರ್ಧೆಗಳಲ್ಲಿ ಹೆಚ್ಚುಹೆಚ್ಚಾಗಿ ಭಾಗವಹಿಸಬೇಕೆಂದೂ ಈಬಗ್ಗೆ ಉಪಾಧ್ಯಾಯರೂ ತಾಯಿತಂದೆಗಳೂ ಪ್ರೋತ್ಸಾಹ ಕೊಡಬೇಕೆಂದೂ ಕೋರಿದರು.

ಕೊನೆಯಲ್ಲಿ, ಪರಿಷತ್ತಿನ ಉಪಾಧ್ಯಕ್ಷರಾದ ರಾಜಸೇವಾಸಕ್ತ ಶ್ರೀ|| ಬಿ. ಎಂ. ಶ್ರೀಕಂಠಯ್ಯನವರು, ಸ್ಪರ್ಧೆಗಳನ್ನು ಯಶಸ್ವಿಯಾಗಿ ನಡಸಿಕೊಟ್ಟದ್ದಕ್ಕಾಗಿ ವ್ಯವಸ್ಥಾಪಕರಾದ ಶ್ರೀ|| ವಿ. ಟಿ. ತಿರುನಾರಾಯಣಯ್ಯಂಗಾರ್ಯರವರಿಗೂ, ಪರೀಕ್ಷಕರಿಗೂ, ಮತ್ತು ಸ್ಪರ್ಧೆಗಳನ್ನು ಪ್ರೋತ್ಸಾಹಿಸಿದ ಶಾಲಾ ಉಪಾಧ್ಯಾಯರಿಗೂ ತಾಯಿತಂದೆಗಳಿಗೂ, ಮತ್ತು ಇತರ ಬಗೆಯಲ್ಲಿ ಸಹಕಾರವಿತ್ತ ಎಲ್ಲ ಮಿತ್ರರಿಗೂ ಪರಿಷತ್ತಿನ ಪರವಾಗಿ ತಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು; ಮತ್ತು ಈ ಕಂಠಪಾಠಸ್ಪರ್ಧೆ ದಿನೇ ದಿನೇ ಹೆಚ್ಚು ಆಕರ್ಷಣೀಯವಾಗುತ್ತಿರುವುದು ತಮಗೂ ಮತ್ತು ಎಲ್ಲರಿಗೂ ಬಹು ಹರ್ಷದಾಯಕವಾಗಿದೆಯೆಂದೂ, ಮಕ್ಕಳೂ ಮಹಿಳೆಯರೂ ಹೀಗೆ ಆಗಿಂದಾಗ್ಗೆ ಸೇರಿ ಸಂತೋಷಪಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಪರಿಷತ್ತಿನ ಉದ್ದೇಶವೆಂದೂ ಹೇಳಿದರು.

—ಪ್ರಕಟನ ಶಾಖೆಯಿಂದ.

ಬೆಂಗಳೂರು ಸುಬೋಧ ವಿದ್ಯುನ್ಮುದ್ರಣಾಲಯದ ಮ್ಯಾನೇಜರಾದ ಬಿ. ರಂಗನಾಥರಾಯರು ಅಚ್ಚುಮಾಡಿ,
ಸಂಪಾದಕರಾದ ಅ. ನ. ಕೃಷ್ಣರಾಯರು ಪರಿಷತ್ತಿಗಾಗಿ ಪ್ರಕಟಿಸಿರುತ್ತಾರೆ.